# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
epaper.hampitimes.com | e-mail: hampitimes@gmail.com | M:94486 33038





HAMPI TIMES
No.1 Leading Local News Paper
90,000
E-PAPER READERS
94486 33038
NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201



ಸಂಪುಟ:02 • ಸಂಚಿಕೆ: 93 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 06.10.2024 • ಭಾನುವಾರ • ಪುಟ:08 • ಬೆಲೆ:2

Volume:02 • Issue: 93 • PRGI No:KARKAN/2023/88055 • VIJAYANAGARA • 06.10.2024 • Sunday • Page:08 • Rs:2



100th ANNIVERSARY

# ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘ ನಿ., ವೈ.ನಂ.80, ನಾಗೇನಹಳ್ಳಿ


## 1924-2024

## ನೂರು ವರ್ಷಗಳ ಪಥದ ಸಂಭ್ರಮ

**ದಿನಾಂಕ: 06-10-2024, ಭಾನುವಾರ ಬೆಳಗ್ಗೆ : 10.30ಕ್ಕೆ,**
**ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣ ನಾಗೇನಹಳ್ಳಿ**



**ಸನ್ಮಾನ್ಯ ಶ್ರೀ ಹೆಚ್.ಆರ್.ಗವಿಯಪ್ಪ**
ಮಾನ್ಯ ಶಾಸಕರು, ವಿಜಯನಗರ ವಿಧಾನಸಭಾ ಕ್ಷೇತ್ರ



**ಸನ್ಮಾನ್ಯ ಶ್ರೀ ಕೆ.ಎನ್.ರಾಜಣ್ಣರವರು**
ಮಾನ್ಯ ಸಹಕಾರ ಸಚಿವರು, ಕರ್ನಾಟಕ ಸರ್ಕಾರ, ಬೆಂಗಳೂರು

## ಶತಮಾನೋತ್ಸವ ಸಮಾರಂಭಕ್ಕೆ ಸರ್ವರಿಗೂ ಸುಸ್ವಾಗತ




ಸ್ವಾಗತ ಕೋರುವವರು :
**ಆಡಳಿತ ಮಂಡಳಿ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಹಾಗೂ ಸಿಬ್ಬಂದಿ, ನಾಗೇನಹಳ್ಳಿ, ಹೊಸಪೇಟೆ ತಾ., ವಿಜಯನಗರ ಜಿಲ್ಲೆ.**

ಹಂಪಿ ಟೈಮ್ಸ್ HAMPI TIMES

# ನಡೆದ ದಾರಿಯನ್ನು ನೆನೆಯುತ್ತ...



ಶ್ರೀ ಸಿ.ಹಾಶ್ಯಾಂ
ಅಧ್ಯಕ್ಷರು ವಿ.ಪ್ರಾ.ಗ್ರಾ.ಸ.ಸಂಘ ನಾಗೇನಹಳ್ಳಿ

ಕಳೆದ ಒಂದು ಕಾಲು ಶತಮಾನಗಳ ಹಿಂದೆ ಹುಟ್ಟಿದ ಸಹಕಾರ ಎಂಬ ಚಳವಳಿ ದೇಶದೆಲ್ಲೆಡೆ ಸಂಚಲನ ಮೂಡಿಸಿದ್ದು, ಮಾನವ ಸಂಕುಲದ ಆರ್ಥಿಕ ಬೆಳವಣಿಗೆಗೆ ಪೂರಕವಾಗಿದೆ. ತಾನು ಎಲ್ಲರಿಗಾಗಿ ಎಲ್ಲರೂ ತನಗಾಗಿ ಎಂಬ ಸಹಕಾರಿ ತತ್ವ ಇಂದು ಇಡೀ ಮನುಷ್ಯ ಕುಲದ ಪ್ರಗತಿಗೆ ನಾಂದಿಯಾಗಿದೆ. ಇದರ ಸದುಪಯೋಗ ಪ್ರತಿಯೊಬ್ಬರ ಸಂತಸ ಹಾಗೂ ಅಭಿವೃದ್ಧಿಗೆ ಮುನ್ನುಡಿಯಾಗಿದ್ದು, ಸಹಕಾರವಿಲ್ಲದೇ ಬದುಕೇ ಇಲ್ಲ ಎಂಬಂತೆ ಸಹಕಾರಿ ಕ್ಷೇತ್ರ ಜೀವನದಲ್ಲಿ ಹಾಸುಹೊಕ್ಕಿದೆ.

ಈ ನಿಟ್ಟಿನಲ್ಲಿ ಐತಿಹಾಸಿಕ ಹಂಪಿಯ ಕೂಗಳತೆಯಲ್ಲಿರುವ ನಾಗೇನಹಳ್ಳಿಯಲ್ಲಿ 1924ನೇ ಅಕ್ಟೋಬರ್ 18ನೇ ತಾರೀಕಿನಂದು ಶ್ರೀ ಚನ್ನಬಸವೇಶ್ವರ ಸೇವಾ ಸಹಕಾರ ಸಂಘ ನಿ. ವೈ.ನಂ. 80 ನಾಗೇನಹಳ್ಳಿ ಎಂದು ಮದ್ರಾಸ್ ಸರ್ಕಾರದಡಿಯಲ್ಲಿ ರಿಜಿಸ್ಟರ್ ಆಗಿದ್ದ ಸಂಘಕ್ಕೆ ಇದೀಗ ಭರಪೂರ ನೂರು ವರ್ಷಗಳ ಸಂಭ್ರಮ!

ನಿಜಕ್ಕೂ ನನಗೆ ಖುಷಿಯಾಗುತ್ತಿದೆ. ಈ ಸಂಘವು ನಡೆದು ಬಂದ ದಾರಿಯನ್ನು ಒಮ್ಮೆ ಹಿಂತಿರುಗಿ ನೋಡಿದರೆ ಅಚ್ಚರಿ, ಆನಂದ ಉಂಟಾಗುತ್ತಿದೆ. ಪ್ರಾರಂಭದಲ್ಲಿ ಸಂಘದ ಉಪನಿಯಮದಂತೆ ಒಂದು ರೂಪಾಯಿ ಪಾಲು ವಂತಿಕೆ ಸಲ್ಲಿಸಿ ಸದಸ್ಯತ್ವ ಪಡೆಯುವ ಅವಕಾಶವಿತ್ತು. ಸಂಘದ ಕಾರ್ಯವ್ಯಾಪ್ತಿ ನಾಗೇನಹಳ್ಳಿ ಗ್ರಾಮಕ್ಕೆ ಮಾತ್ರ ಸೀಮಿತವಾಗಿತ್ತು. ಇದು ತದನಂತರ ಷೇರು ರೂ.10 ಎಂತಲೂ ನಂತರ ರೂ.50 ಎಂತಲೂ ನಂತರ ದಿನಾಂಕ 31–3–1999 ರ ಉಪನೇಮಗಳ ತಿದ್ದುಪಡಿ ಸರ್ಕಾರದ ಆದೇಶದ ಪ್ರಕಾರ ರೂ.100 ಷೇರು ಎಂತಲೂ ಆಗಿರುತ್ತದೆ. ನಂತರ ನಾಗೇನಹಳ್ಳಿ, ಕಾಳಘಟ್ಟ (ಬಸವನದುರ್ಗಾ, ಬೆನಕಾಪುರ ಗ್ರಾಮ)ಗಳಿಗೆ ಸೀಮಿತವಾಗಿ ಸಂಘವು ಅಂದಿನಿಂದಲೂ ಕೃಷಿಕರ ಅಭ್ಯುದಯವನ್ನು ಸಹಕಾರ ಚಳುವಳಿಯ ಮೂಲಕ ಆರ್ಥಿಕವಾಗಿ ಮೇಲೆಳುವಂತೆ ಮಾಡುವ ಕಾರ್ಯ ಮಾಡುತ್ತಾ ಬಂದಿದೆ. ಅಂದು ಸಂಘದಲ್ಲಿ 130 ಸದಸ್ಯರು ಇದ್ದರೆ ಇಂದು 840 ಸದಸ್ಯಯರಿದ್ದೂ ಒಟ್ಟು ಪಾವತಿಯಾದ ಷೇರು ಬಂಡವಾಳವು ಸದಸ್ಯರಿಂದ ರೂ.73,95,900 ಹಾಗೂ ಸರ್ಕಾರದಿಂದ ರೂ.1,50,000 ಒಟ್ಟು ರೂ. 75,45,900 ದುಡಿಯುವ ಬಂಡವಾಳವು ರೂ. 6,16,08,266 ಗಳು ಇರುತ್ತದೆ.

## ಸಾಲಗಳ ವಹಿವಾಟು

31.03.2024ಕ್ಕೆ ಅಂತ್ಯಗೊಂಡಂತೆ ಈ ಸಾಲಿನಲ್ಲಿ ಬೆಳೆ ಸಾಲವಾಗಿ ಸದಸ್ಯರಿಗೆ ವಿತರಿಸುವ ಸಲುವಾಗಿ ಬಿ.ಡಿ.ಸಿ.ಸಿ. ಬ್ಯಾಂಕಿನಿಂದ ಪಡೆದ ಅಲ್ಪಾವಧಿ ಸಾಲ ಮತ್ತು ಮರುಪಾವತಿ ಮಾಡಿದ ವಿವರ ರೂ. ಲಕ್ಷಗಳಲ್ಲಿ ಇಂತಿದೆ..

| ಪ್ರತಿಶತ ಡಿಮಾಂಡಿಗೆ | ಪಡೆದ ಸಾಲ ವರ್ಷಾಂತ್ಯಕ್ಕೆ ನಿಲುವು ಬಾಕಿ | ಮರು ಪಾವತಿಸಿದ ಸಾಲ |
|---|---|---|
| ಬ್ಯಾಂಕಿನಿಂದ | 590.23 | 173.11 |
| 100% | 458.57 | |
| ಸದಸ್ಯರಿಗೆ ಕೊಟ್ಟಸಾಲ | 608.88 | 151.37 |
| 85% | 476.84 | |

## ವ್ಯಾಪಾರ

ಪ್ರಸ್ತುತ ಸಾಲಿನ ಅವಧಿಯಲ್ಲಿ ಬ್ಯಾಂಕ್ ರಾಸಾಯನಿಕ ಗೊಬ್ಬರ ಕ್ರಿಮಿನಾಶಕ ಹಾಗೂ ಪಡಿತರ ಚೀಟಿಯ ಆಹಾರಧಾನ್ಯ ಮಾರಾಟವನ್ನು ವಿತರಣೆಯನ್ನು ಹೊಣೆಗಾರಿಕೆಯಿಂದ ನಿರ್ವಹಿಸಿಕೊಂಡು ಬಂದಿದೆ. ಈ ಕೆಳಗಿನಂತೆ ಸ್ಥೂಲ ವ್ಯಾಪಾರಿ ಲಾಭ ರೂ. 3.36 ಲಕ್ಷ ಸಂಘಕ್ಕೆ ಸಂಪಾದನೆ ಆಗಿರುತ್ತದೆ, ಜೊತೆಗೆ ಸಂಘವು ರೈತ ಸದಸ್ಯರುಗಳಿಗೆ ಸಮಯಾನುಸಾರ ಅಗತ್ಯಗಳಿಗೆ ಕ್ರಿಬ್ ಕೋ, ಇಫ್ಕೋ ಹಾಗೂ ಟಿ.ಎ.ಪಿ.ಸಿ.ಎಂ.ಎಸ್ ಹೊಸಪೇಟೆ ಇವರ ಸಹಾಯ ಸಹಕಾರದಿಂದ ರಾಸಾಯನಿಕ ಗೊಬ್ಬರ, ಕ್ರಿಮಿನಾಶಕ, ಕಳೆನಾಶಕಗಳನ್ನು ಸರಬರಾಜು ಮಾಡಿದ ತೃಪ್ತಿ ಸಂಘಕ್ಕೆ ಇದೆ.

## ವ್ಯವಸಾಯ ಕ್ಷೇತ್ರ

ಪ್ರಸಕ್ತ ಸಾಲಿನಲ್ಲಿ ಸಂಘದ ಕಾರ್ಯಕ್ಷೇತ್ರ ವ್ಯಾಪ್ತಿಯಲ್ಲಿ ಬೆಳೆದ ಕಬ್ಬನ್ನು ಸಂಘದ ಮೂಲಕ ಐ.ಎಸ್.ಆರ್. ಸಕ್ಕರೆ ಕಾರ್ಖಾನೆಗೆ ಆಯಾ ವರ್ಷದಲ್ಲಿ ನಿಗದಿ ಪಡಿಸಿದ ಕಬ್ಬಿನ ದರದಂತೆ ಕಬ್ಬು ಸರಬರಾಜು ಮಾಡುವ ವ್ಯವಸ್ಥೆ ರೂಢಿಸಿಕೊಂಡಿದ್ದೇವೆ. ಈ ಸಾಲಿನಲ್ಲಿ ರೂ.800 ಟನ್ ಒಂದಕ್ಕೆ ನಿಗದಿಯಾಗಿದ್ದು ಸುಮಾರು 360 ಎಕರೆಯಿಂದ 15556 ಮೆಟ್ರಿಕ್ ಟನ್ ಕಬ್ಬು ಸರಬರಾಜು ಮಾಡಿಸಿರುತ್ತವೆ. ಬಳ್ಳಾರಿ ಜಿಲ್ಲಾ ಕೃಷಿ ತಜ್ಞರ ಸಮಿತಿಯವರು ಆಯಾ ವರ್ಷದ ಸಾಲಿಗೆ ನಿಗದಿ ಪಡಿಸಿದ ಬೆಳೆವಾರು ರ್ಥಿಕ ಶಿಫಾರಸ್ಸಿಗೆ ಅನುಗುಣವಾಗಿ ಬೆಳೆಸಾಲ ಮಂಜೂರು ಮಾಡಿ ವಿತರಣೆ ಮಾಡಲಾಗಿದೆ. 2024–25 ನೇ ಸಾಲಿನಲ್ಲಿ ಕಬ್ಬಿನ ಬೆಳೆಗೆ ಎಕರೆ ಒಂದಕ್ಕೆ ರೂ.70,000 ರಂತೆ ನಿಗದಿಯಾಗಿರುತ್ತದೆ.

## ಸಿಬ್ಬಂದಿ

ಸಂಘದ ಕೆಲಸ ನಿರ್ವಹಿಸಿಕೊಂಡು ಹೋಗಲು ಇಲಾಖೆಯ ಅನುಮೋದನೆಯಂತೆ ಮೂವರಿದ್ದು ಆ ಪ್ರಕಾರ ಒಬ್ಬರು ಮುಖ್ಯ ಕಾರ್ಯನಿರ್ವಾಹಕರು ಕೆ.ಲೋಹಿತಾಶ್ವ, ಸಹಾಯಕ ಜಿ.ಶಿವರಾಜ್ ಮತ್ತು ಒಬ್ಬರು ಕೃಷ್ಣ ಪಿಗ್ಮಿ ಏಜೆಂಟ್ ಹಾಗೂ ಕಂಪ್ಯೂಟರ್ ಆಪರೇಟರ್ ಹೀಗೆ ಒಟ್ಟು ಮೂವರು ಸಿಬ್ಬಂದಿ ಸಂಘವು ಪ್ರಗತಿ ಪಥದಲ್ಲಿ ಪ್ರತಿ ವರ್ಷ ಲಾಭ ಬರುವಂತೆ ಕೆಲಸ ನಿರ್ವಹಿಸುತ್ತಿದ್ದಾರೆ.

## ಸಭೆಗಳು

ಪ್ರಸಕ್ತ ಸಾಲಿನಲ್ಲಿ ಈ ಕೆಳಕಾಣಿಸಿದಂತೆ ಸಂಘದ ಕಾರ್ಯನಿರ್ವಾಹಕ ಸಮಿತಿ ಸಭೆಗಳನ್ನು ನಡೆಸಿ ಸಂಘದ ಆಡಳಿತ ನಿರ್ವಹಣೆಯನ್ನು ನಿರ್ವಹಿಸಿಕೊಂಡು ಹೋಗಲು ಸಂಬಂಧಿಸಿದ ಸೂಕ್ತ ವಿಷಯಗಳ ಬಗ್ಗೆ ತೀರ್ಮಾನಗಳನ್ನು ಕೈಗೊಳ್ಳುವ ಮೂಲಕ ಸಂಘದ ಆಡಳಿತ ನಡೆಯಲು ಅನುವು ಮಾಡಿರುತ್ತಾರೆ. ಆಡಳಿತ ಮಂಡಳಿ ಸಭೆಗಳು 15 ಸಭೆಗಳು ಹಾಗೂ ಒಂದು ವಾರ್ಷಿಕ ಮಹಾಜನ ಸಭೆ 15–07–2024 ರಂದು ಜರುಗಿರುತ್ತದೆ.

## ಆಡಿಟ್ ವರ್ಗ

2023–24 ನೇ ಸಾಲಿನಲ್ಲಿ ಶ್ರೀ ಕೆ.ಗೋಪಾಲಕೃಷ್ಣ ಲೆಕ್ಕ ಪರಿಶೋಧಕರು ಹೊಸಪೇಟೆ ಇವರು ಲೆಕ್ಕಪತ್ರಗಳನ್ನು ಪರಿಶೋಧಿಸಿರುತ್ತಾರೆ. ಸಂಘದ ವ್ಯವಹಾರಿಕ ಸಾಂಪತ್ತಿಕ ಸ್ಥಿತಿ, ಲೆಕ್ಕ ಪತ್ರಗಳನ್ನು ಇಡುವಿಕೆ ಹೆಚ್ಚಿನ ಮುದ್ದತು ಮೀರಿದ ಸಾಲಗಳು ಇಲ್ಲದಿರುವಿಕೆ ಸಂಘವು ಹೊಂದಿದ ಲಾಭ ಮುಂತಾದ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಸಂಘದ ಗುಣಮಟ್ಟ ನಿರ್ಧರಿಸುವ ವರ್ಗೀಕರಣದಲ್ಲಿ ಸಂಘವನ್ನು "ಬಿ" ವರ್ಗದ ಶ್ರೇಣಿಯಲ್ಲಿ ವರ್ಗೀಕರಿಸಿರುತ್ತಾರೆ. ಸದ್ರಿಯವರ ಲೆಕ್ಕ ಪರಿಶೋಧನಾ ಮೇಲ್ವಿಚಾರಣೆಯನ್ನು ಶ್ರೀ ಲಕ್ಷ್ಮಣ ಕಾಕುಬಾಳು ಲೆಕ್ಕ ಪರಿಶೋಧಕರು ಹೊಸಪೇಟೆ ಇವರು ದಿನಾಂಕ 30–06–2024 ರಂದು ಮಾಡಿರುತ್ತಾರೆ.

## ನಿವ್ವಳ ಲಾಭ

2023–24 ನೇ ಸಾಲಿನಲ್ಲಿ ಬ್ಯಾಂಕ್ ರೂ.7,11,697.99 ಗಳ ನಿವ್ವಳ ಲಾಭವನ್ನು ಸಂಪಾದಿಸಿದ್ದು ಸಂಘದ ಉಪನೇಮ 25 (2) ಅನುಸಾರ




ಸದಸ್ಯರಿಗೆ ಹಾಗೂ ಸರಕಾರಕ್ಕೆ ಲಾಭಾಂಶವನ್ನು ಶೇ.12 ರಂತೆ ವಿಲೇವಾರಿ ಮಾಡಿ ಹಂಚಿರುತ್ತೇವೆ.

## ಪ್ರಶಸ್ತಿಗಳು

1993–94ನೇ ಸಾಲಿನಲ್ಲಿ ಹಾಗೂ 96–97ನೇ ಸಾಲಿನಲ್ಲಿ ಜಿಲ್ಲಾ ಮಟ್ಟದಲ್ಲಿ ಉತ್ತಮ ಸಾಲ ವಸೂಲಿ ಮಾಡಿದ್ದಕ್ಕಾಗಿ ಮಾನ್ಯ ಸಹಕಾರ ಸಚಿವರಾದ ಎಸ್.ಎಸ್. ಪಾಟೀಲ್ ಇವರಿಂದ ಪ್ರಶಸ್ತಿಗಳನ್ನು ಪಡೆದಿರುತ್ತೇವೆ. ಇದಕ್ಕೆ ಕಾರಣರಾದ ಸಂಘದ ಸದಸ್ಯರು, ಆಡಳಿತ ಮಂಡಳಿಯವರು, ನೌಕರ ವರ್ಗದವರುಗಳ ಸಹಕಾರವನ್ನು ಸಂಘವು ಸ್ಮರಿಸುತ್ತದೆ.

## ಅಮೃತ ಮಹೋತ್ಸವ

ನಾಗೇನಹಳ್ಳಿ ಸಂಘವು ಸ್ಥಾಪನೆಗೊಂಡಾಗಿನಿಂದ ಈವರೆಗೆ ರೈತ ಸಮುದಾಯಕ್ಕೆ ಹಾಗೂ ಸಾರ್ವಜನಿಕ ಸೇವೆಯಲ್ಲಿ ನಿರಂತರವಾಗಿ 75 ವರ್ಷಗಳನ್ನು ಪೂರ್ಣಗೊಳಿಸಿದ ಸಂದರ್ಭ ಇದರ ಸಾರ್ಥಕತೆಯ ಸವಿ ನೆನಪಿಗಾಗಿ ಬ್ಯಾಂಕಿನ ಅಮೃತ ಮಹೋತ್ಸವವನ್ನು ಸಮಾರಂಭವನ್ನು 06.01.2001 ರಂದು ಅದ್ದೂರಿಯಾಗಿ ಆಚರಿಸಿದ್ದು ಸ್ಮರಣೀಯವಾಗಿದ್ದು, ಈ ಸಂದರ್ಭ ನೆನೆಯಲು ಖುಷಿ ಎನಿಸುತ್ತಿದೆ.

## ಶತಮಾನೋತ್ಸವ ಆಚರಣೆ

ನಾಗೇನಹಳ್ಳಿ ಸಂಘವು ಇದೀಗ ಶತಮಾನದ ಹೊಸ್ತಿಲಿಗೆ ಕಾಲಿರಿಸಿದೆ. ಈ ಖುಷಿಯನ್ನು ಎಲ್ಲರೂ ಒಂದೆಡೆ ಸೇರಿ ಪರಸ್ಪರ ವಿನಿಮಯಿಸಿಕೊಳ್ಳುವ ಆಡಳಿತ ಮಂಡಳಿ ಹಾಗೂ ಗ್ರಾಮಸ್ಥರ ಕನಸು ಇಂದು ನನಸಾಗಿದೆ. ಜತೆಗೆ 100 ವರ್ಷಗಳ ಪಯಣದ ಹಿನ್ನೋಟವನ್ನು ದಾಖಲಿಸುವ ಇಚ್ಛೆಯನ್ನು ಎಲ್ಲರೂ ವ್ಯಕ್ತ ಪಡಿಸಿದ ಫಲವಾಗಿ ಇಂದು ಸ್ಮರಣ ಸಂಚಿಕೆ ತಮ್ಮ ಕೈಯಲ್ಲಿದೆ. ಸಂಘವು ಈವರೆಗೆ ನಡೆದು ಬಂದ ಹೆಜ್ಜೆ ಗುರುತಿನೊಂದಿಗೆ ಸಹಕಾರಕ್ಕೆ ಸಂಬಂಧಿಸಿದ ಲೇಖನ ಹಾಗೂ ನಾಗೇನಹಳ್ಳಿ ಗ್ರಾಮವನ್ನು ಪರಿಚಯಿಸಿ ಕೊಡುವ ಸಣ್ಣ ಪ್ರಯತ್ನ ಮಾಡಲಾಗಿದ್ದು, ಇದು ತಮಗೆ ಇಷ್ಟವಾಗುತ್ತದೆ ಎಂದು ಭಾವಿಸುವೆ. ಹೂವಿನೊಂದಿಗೆ ನಾರೂ ಸ್ವರ್ಗ ಸೇರಿತು ಎಂಬ ಮಾತಿನಂತೆ ಶತಮಾನೋತ್ಸವದಂಥ ಸುಕೃತ ಕಾರ್ಯದಲ್ಲಿ ನಾವೆಲ್ಲರೂ ಇದ್ದೇವು ಎಂಬುದೇ ಸಾರ್ಥಕ ಭಾವ ಮೂಡಿಸುತ್ತಿದೆ. ಈ ಭಾವ, ಈ ಸಂಭ್ರಮ, ಈ ಪ್ರಗತಿ ಇನ್ನೂ ನೂರ್ಮಡಿಸಲಿ ಎಂದು ಆಶಿಸುವೆ.

ನಮ್ಮ ನಾಗೇನಹಳ್ಳಿಯ ಹೆಮ್ಮೆ, ಘನತೆಗೆ ಕಾರಣರಾದ ಸಂಘದ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಪಾಟೀಲ್ ಅಯ್ಯನಗೌಡ್ರ ಸೇರಿದಂತೆ ಸಂಘಕ್ಕಾಗಿ ನೂರು ವರ್ಷಗಳ ಆಯಾ ಕಾಲಘಟ್ಟದಲ್ಲಿ ದುಡಿದ ಆಡಳಿತ ಮಂಡಳಿ ಮತ್ತು ಬಿಡಿಸಿಸಿ ಬ್ಯಾಂಕಿನ ಅಧಿಕಾರಿಗಳು ಸೇರಿದಂತೆ ಎಲ್ಲರನ್ನೂ ಈ ಸಂದರ್ಭ ನೆನೆಯುವೆ. ಹಾಗೆಯೇ ಅನ್ನದಾತರಾದ ರೈತರು, ಗ್ರಾಹಕರು ದೇವರು ಎಂಬ ಮಾತಿದೆ. ಅಂತೆಯೇ ಸಕಾಲಕ್ಕೆ ಸಾಲ ಮರು ಪಾವತಿಸಿ ಸಂಘದ ಪ್ರಗತಿಯನ್ನು ದ್ವಿಗುಣಗೊಳಿಸಿದ ರೈತರಿಗೂ ಹಾಗೂ ಸಂಘದ ಏಳಿಗೆಗಾಗಿ ಸದಾ ನನ್ನೊಂದಿಗೆ ಶ್ರಮಿಸಿದ ಪ್ರಸ್ತುತ ಆಡಳಿತ ಮಂಡಳಿಯವರಿಗೂ, ಸಿಬ್ಬಂದಿ ವರ್ಗಕ್ಕೂ, ಶತಮಾನೋತ್ಸವ ಸಮಾರಂಭಕ್ಕೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಶ್ರಮಿಸಿದ ಎಲ್ಲರಿಗೂ ಜತೆಗೆ ನಾಗೇನಹಳ್ಳಿ ಮತ್ತು ಸುತ್ತಲಿನ ನನ್ನೆಲ್ಲ ಭಗಿನಿಯರಿಗೂ, ಗ್ರಾಮಸ್ಥರಿಗೂ ಮನಪೂರ್ವಕ ಕೃತಜ್ಞತೆಗಳು.

**ಜೈ ಸಹಕಾರ.**



# ಹಂಪಿ ಟೈಮ್ಸ್

## HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY

epaper.hampitimes.com | Email: hampitimes@gmail.com | M:94486 33038

ಸಂಪುಟ:02 • ಸಂಚಿಕೆ: 93 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 06.10.2024 • ಭಾನುವಾರ • ಪುಟ:08 • ಬೆಲೆ:2
Volume:02 • Issue: 93 • PRGI No:KARKAN/2023/88055 • VIJAYANAGARA • 06.10.2024 • Sunday • Page:08 • Rs:2







|| ಶ್ರೀ ಗುರು ಬಸವಲಿಂಗಾಯ ನಮಃ ||







ಪೂಜ್ಯ ಶ್ರೀ.ಮ.ನಿ.ಪ್ರ.ಸ್ವ.ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು ಇವರಿಗೆ

## ಜನ್ಮ ದಿನದ ಹಾರ್ದಿಕ ಶುಭಾಶಯಗಳು

ಪೂಜ್ಯ ಶ್ರೀ.ಮ.ನಿ.ಪ್ರ.ಸ್ವ.ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳಿಗೆ ಜನ್ಮ ದಿನದ ಹಾರ್ದಿಕ ಶುಭಾಶಯಗಳು. ನಿಮ್ಮ ಕೃಪೆಯಿಂದ ನಮ್ಮ ಜೀವನವು ಸದಾ ಬೆಳಕಿನ ದಾರಿಯಲ್ಲಿ ಸಾಗುತ್ತಿದೆ. ನಿಮ್ಮ ಆಶೀರ್ವಾದದ ನೆರಳಿನಲ್ಲಿ ನಾವು ನಮ್ಮ ಬದುಕಿನಲ್ಲಿ ಶ್ರೇಯಸ್ಸು ಮತ್ತು ಶಾಂತಿಯನ್ನು ಕಂಡುಕೊಳ್ಳುತ್ತಿದ್ದೇವೆ. ಬಸವಾದಿ ಶರಣರು ನಿಮಗೆ ದೀರ್ಘಾಯುಷ್ಯ, ಆರೋಗ್ಯ ನೀಡಲೆಂದು ಕೃತಜ್ಞತಾ ಮತ್ತು ಭಕ್ತಿಯಿಂದ ಪ್ರಾರ್ಥಿಸುತ್ತೇವೆ.



ಗುರುವಿಂದ ದೈವಗಳು ಗುರುವಿಂದ ಬಂಧುಗಳು
ಗುರುವಿಂದಲೇ ಸಕಲ ಪುಣ್ಯಂಗಳು ಲೋಕಕ್ಕೆ
ಗುರುವೀಗ ದೈವ ಸರ್ವಜ್ಞ ||

ಪೂಜ್ಯ ಶ್ರೀ.ಮ.ನಿ.ಪ್ರ.ಸ್ವ.ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು

### ಭಕ್ತಿ ಪೂರ್ವಕ ಶುಭಕೋರುವವರು:

ಅಧ್ಯಕ್ಷರು ಮತ್ತು ಪದಾಧಿಕಾರಿಗಳು

**ಹೊಸಪೇಟೆ ತಾಲೂಕು ವೀರಶೈವ ಲಿಂಗಾಯತ ಸಮಾಜ (ರಿ)**
**ಹೊಸಪೇಟೆ ನಗರ ವೀರಶೈವ ಲಿಂಗಾಯತ ಸಮಾಜ**
**ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾ ಘಟಕ ವಿಜಯನಗರ**
**ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಘಟಕ ಹೊಸಪೇಟೆ**

# ಸಮಾಜ ಸಂವರ್ಧಕ ಯುವಯತಿ

## ಪೂಜ್ಯ ಶ್ರೀ ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು





ಭಾರತದಲ್ಲಿ ಧರ್ಮ ಪ್ರತಿಯೊಬ್ಬ ಮನುಷ್ಯನ ಉಸಿರೊಂದಿಗೆ ಬೆರೆತುಹೋಗಿದೆ. ಧರ್ಮರಹಿತ ಸಮಾಜವನ್ನು ಇಲ್ಲಿ ಊಹಿಸುವುದು ಅತ್ಯಂತ ಕಷ್ಟ. ಈ ಧರ್ಮದ ಆಚರಣೆಯೊಂದಿಗೆ ಜನರು ತಮ್ಮ ಬದುಕನ್ನು ಅರ್ಥಪೂರ್ಣವಾಗಿಸಿಕೊಂಡಿದ್ದಾರೆ. ಕನ್ನಡ ನಾಡಿನಲ್ಲಿ ಸಾವಿರಾರು ಮಠ–ಪೀಠಗಳಿವೆ. ನಾಡಿನ ಆಧ್ಯಾತ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚರಿತ್ರೆಯಲ್ಲಿ ಇವುಗಳ ಪಾತ್ರ ಗುರುತರವಾದುದಾಗಿದೆ.

ವಿಜಯನಗರ ಸಾಮ್ರಾಜ್ಯದ ಪತನಾನಂತರದಲ್ಲಿ ಅಧಿಕಾರಕ್ಕೆ ಬಂದ ಬಳ್ಳಾರಿ ಹಂಡೆ ಅರಸರಿಗೆ ರಾಜಗುರುಗಳಾಗಿ, ಮುಂದುವರೆದು ಗುಡೇಕೋಟೆ, ಆನೆಗುಂದಿ, ಹರಪನಹಳ್ಳಿ ಪಾಳೆಯಪಟ್ಟುಗಳಿಗೆ ಮಾರ್ಗದರ್ಶನ ಮತ್ತು ಆಶೀರ್ವಾದ ಮಾಡಿದ ಶ್ರೇಷ್ಠ ಗುರುಪರಂಪರೆಯನ್ನು ಹೊಂದಿದ ಕನ್ನಡ ನಾಡಿನ ಮಠವೇ ಹಂಪಿಹೇಮಕೂಟ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ. ಕ್ರಿ.ಶ. 1517ರಲ್ಲಿ ಪ್ರಾರಂಭವಾಗುವ ಮಠದ ಇತಿಹಾಸ ಇಂದಿನವರೆಗೂ ನಿರಂತರವಾಗಿ ಮುಂದುವರೆದುಕೊಂಡು ಬಂದಿದೆ. ಈ ಮಠದ ಸದ್ಯದ ಇಪ್ಪತ್ತನೇ ಪೀಠಾಧಿಪತಿಗಳೂ, ಯುವಯತಿಗಳೂ ಆದ ಪೂಜ್ಯಶ್ರೀ ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳಿಗೆ ಇಂದು 32ನೇ ಜನ್ಮದಿನದ ಶುಭದಿನ. ತಾವು ಮಠದ ಅಧಿಕಾರವನ್ನು ಹೊಂದಿದ ಕೆಲ ವರ್ಷಗಳಲ್ಲಿಯೇ ಸರ್ವಜನಾಂಗದವರ ಪ್ರೀತ್ಯಾಧರಗಳನ್ನು ಸಂಪಾದಿಸಿದ ಪೂಜ್ಯರ ಬಗೆಗೆ ಒಂದಿಷ್ಟು ಪರಿಚಯವನ್ನು ಮಾಡಿಕೊಡುವುದೇ ಈ ಲೇಖನದ ಉದ್ದೇಶ.

### ಜನನ–ಬಾಲ್ಯ–ಶಿಕ್ಷಣ :

ಇವರ ಪೂರ್ವಾಶ್ರಮದ ಹೆಸರು ವಿಜಯಕುಮಾರ ಬೆಳ್ಳೇರಿಮಠ. ಕರ್ನಾಟಕದ ವಾಣಿಜ್ಯನಗರಿ ಹುಬ್ಬಳ್ಳಿ ಅಂಚಿನಲ್ಲಿರುವ ಕುಸುಗಲ್ಲ ಗ್ರಾಮದ ವೀರೇಶ ಬೆಳ್ಳೇರಿಮಠ ಹಾಗೂ ಶ್ರೀಮತಿ ನೇತ್ರಾವತಿ ಬೆಳ್ಳೇರಿಮಠ ಶರಣದಂಪತಿಗಳ ಉದರದಲ್ಲಿ 1993 ಅಕ್ಟೋಬರ್–6 ರಂದು ಜನಿಸಿದ್ದಾರೆ. ಪ್ರಾಥಮಿಕ ಶಿಕ್ಷಣವನ್ನು ಕುಸುಗಲ್ಲ ಗ್ರಾಮದಲ್ಲಿ ಪೂರೈಸಿ 7ನೇ ತರಗತಿಯನ್ನು ಹಾನಗಲ್ಲ ವಿರಕ್ತಮಠದಲ್ಲಿ ಉತ್ತೀರ್ಣರಾಗಿದ್ದಾರೆ. ಶಾಲೆಯಲ್ಲಿ ಶಿಕ್ಷಕರ ಅಕ್ಕರೆ ಗಿಟ್ಟಿಸಿಕೊಂಡಿದ್ದ ಇವರು ಎಲ್ಲರಿಗೂ ಅಚ್ಚುಮೆಚ್ಚಿನ ವಿದ್ಯಾರ್ಥಿಯಾಗಿದ್ದರು. ಉಳಿದ ಮಕ್ಕಳಂತೆ ಬಾಲಕ ವಿಜಯಕುಮಾರಗೆ ಬಿಡುವಿನ ಸಮಯದಲ್ಲಿ ಆಟೋಟೋಪಗಳಲ್ಲಿ ಆಸಕ್ತಿ ಇರದೇ, ಸದಾ ಆಧ್ಯಾತ್ಮದೆಡೆಗೆ ಮನಸ್ಸು ಹಾತೊರೆಯುತ್ತಿತ್ತು. ತನ್ನ ಬಹುಪಾಲು ಸಮಯವನ್ನು ಅಜ್ಜ ಕಟ್ಟಿಸಿದ ಮಠದಲ್ಲಿಯೇ ಕಳೆಯುತ್ತ, ಮನೆಗೆ ಊಟಕ್ಕೆ ಮಾತ್ರ ಬಂದು ಮತ್ತೆ ಮಠಕ್ಕೆ ಹೋಗಿ ಅಜ್ಜ ಹೇಳುವ ಬಸವಾದಿ ಶಿವಶರಣರ ಕಥೆಗಳನ್ನು ಕೇಳುತ್ತ ಬೆಳೆದವರು.

ಅಜ್ಜ ಚನ್ನವೀರಯ್ಯಸ್ವಾಮಿಗಳು ಸಂಸಾರಾಸಕ್ತಿಯನ್ನು ಕಳೆದುಕೊಂಡು, ತನ್ನ ನಾಲ್ಕು ಜನ ಮಕ್ಕಳಿಗೆ ಮನೆಯ ಜವಾಬ್ದಾರಿಯನ್ನು ಕೊಟ್ಟು ಮಠದಲ್ಲಿ ಭಜನೆ ಮಾಡುತ್ತ, ಸಂಚಾರಿ ಶಿವಾನುಭವದಂಥ ಸಾಮಾಜಿಕ ಧಾರ್ಮಿಕ ಜಾಗೃತಿಯನ್ನುಂಟುಮಾಡುವ ಕೆಲಸಗಳನ್ನು ಮಾಡುತ್ತಿದ್ದ. ಇವೆಲ್ಲವೂ ಬಾಲಕ ವಿಜಯಕುಮಾರನ ಮೇಲೆ ಅಗಾಧಪರಿಣಾಮ ಬೀರಿದ್ದವು. ಧಾರ್ಮಿಕ ವಿಚಾರಗಳನ್ನು ಕೇಳುತ್ತ ತನಗೆ ಗೊತ್ತಿಲ್ಲದಂತೆ ಸ್ವಾಮಿಯಾಗಬೇಕೆಂಬ ಬೀಜವು ಮೊಳಕೆಯೊಡೆದು ಅಜ್ಜನ ಜೊತೆಗೆ ಹೆಚ್ಚು ಸಮಯ ಕಳೆದಂತೆಲ್ಲ ಮರವಾಗಿ ಪಲ್ಲವಿಸಿತು.

ತಮ್ಮ ತಂದೆ–ತಾಯಿಗೆ ಒಬ್ಬನೇ ಗಂಡು ಮಗುವಾಗಿದ್ದರೂ ಮನೆಯವರ ವಿರೋಧದ ನಡುವೆಯೂ ಛಲಬಿಡದೇ ಶಿವಯೋಗಮಂದಿರ ಸಂಸ್ಥೆಗೆ ಪ್ರವೇಶ ಬಯಸಿ ಬರುತ್ತಾರೆ. ಆಗ ಶಿವಯೋಗಮಂದಿರದ ಅಧ್ಯಕ್ಷರಾಗಿದ್ದವರು ಗುರುಗಳಾದ ಶ್ರೀ ಜಗದ್ಗುರು ಡಾ. ಸಂಗನಬಸವ ಮಹಾಸ್ವಾಮಿಗಳು. ಅವರು ಬಾಲಕ ವಿಜಯಕುಮಾರನ ತೇಜಸ್ಸನ್ನು ನೋಡಿ ಮುಂದೆ ಸಮಾಜಕ್ಕೆ ಸಮರ್ಥ ಸ್ವಾಮಿಯಾಗುತ್ತಾನೆಂದು ಅಂದೇ ಭವಿಷ್ಯ ನುಡಿದಿದ್ದರು. ಈಗ ಅವರ ಮಠದ ಉತ್ತರಾಧಿಕಾರಿಯಾಗಿರುವುದು ಯೋಗವೂ, ಸುಯೋಗವೂ ಆಗಿದೆ. ಶಿವಯೋಗಮಂದಿರದ ಪುಣ್ಯಪರಿಸರದಲ್ಲಿ ಶಿವಯೋಗ, ಸಂಸ್ಕೃತ, ಯೋಗಶಾಸ್ತ್ರ, ವಚನಶಾಸ್ತ್ರ, ತತ್ವಶಾಸ್ತ್ರ, ಸಂಗೀತ ಮತ್ತು ಅಧ್ಯಾತ್ಮಿಕ ವಿಷಯಗಳನ್ನು ಕರಗತ ಮಾಡಿಕೊಂಡು, ತಪೋವನ ಸದೃಶ ಶಿವಯೋಗಮಂದಿರದ ಆ ನಿಸರ್ಗ ಸುಂದರ ಪರಿಸರ, ಹಲವಾರು ಪೂಜ್ಯರ, ಶಿವಯೋಗಿಗಳ ಸಂಪರ್ಕ ಸನ್ನಿಧಾನಗಳ ಪರಿಣಾಮವಾಗಿ ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಸಹಕಾರಿಯಾದವು. ಧರ್ಮತತ್ವ, ದರ್ಶನಶಾಸ್ತ್ರ, ವಿವಿಧ ಸಿದ್ಧಾಂತಗಳಂತಹ ಗೂಢ ವಿಷಯಗಳ ತಲಸ್ಪರ್ಶಿ ಅಧ್ಯಯನದ ಬಗೆಗೆ ತೀವ್ರ ಬಯಕೆ ಹೊಂದಿದ ಪೂಜ್ಯರು ಸಂಸ್ಕೃತದಲ್ಲಿ ಬಿ.ಎ.ವಿದ್ವತ್ ಪದವಿ ಪಡೆದುಕೊಂಡಿದ್ದಾರೆ. ಇವರಲ್ಲಿನ ಆದರ್ಶ ಸ್ವಾಮಿತ್ವದ ಶಕ್ತಿಯನ್ನು ಗುರುತಿಸಿದ ಪೂಜ್ಯಶ್ರೀ ಜಗದ್ಗುರು ಡಾ. ಸಂಗನಬಸವ ಮಹಾಸ್ವಾಮಿಗಳವರು ತಮ್ಮ ಉತ್ತರಾಧಿಕಾರಿಗಳನ್ನಾಗಿ ಸಂತೋಷದಿಂದ ಆಯ್ಕೆ ಮಾಡಿಕೊಳ್ಳುತ್ತಾರೆ.



ಶರಣಯ್ಯ ಎಸ್. ಚರಂತಿಮಠ,
ಲೇಖಕರು, ಹೊಸಪೇಟೆ

Scan For Digital Colourful
HAMPI TIMES E-paper

### ಮಠಾಧಿಕಾರ ಮತ್ತು ಸಮಾಜಸೇವಾ ದೀಕ್ಷೆ :

ಶ್ರೀ ಜಗದ್ಗುರು ಡಾ. ಸಂಗನಬಸವ ಮಹಾಸ್ವಾಮಿಗಳವರ ಅನಾರೋಗ್ಯದ ಸಮಯದಲ್ಲಿ ಒಬ್ಬ ಶಿಷ್ಯ ಗುರುವಿನ ಸೇವೆ ಹೇಗೆ ಮಾಡಬೇಕೆಂಬುದಕ್ಕೆ ಇವರ ಗುರುಸೇವೆಯೇ ನಿದರ್ಶನವಾಗಿದೆ. ಗುರುವಿನ ಸೇವೆ ಮತ್ತು ಸಮಾಜದ ಸೇವೆ ಮಾಡುವ ಭಾಗ್ಯ ಸಿಗುವುದು ಅತೀ ದುರ್ಲಭ ಎಂದು ಅರಿತಿದ್ದ ಪೂಜ್ಯರು ಗುರುಗಳ ಸ್ವಾಸ್ಥ್ಯ ಸಂಬಂಧ ತ್ರಿಕರಣಪೂರ್ವಕವಾಗಿ ಸೇವೆ ಸಲ್ಲಿಸಿದ ಇವರು ಗುರುವಿಗೆ ತಕ್ಕ ಶಿಷ್ಯರು. ಓರ್ವ ಸಮರ್ಥ ಉತ್ತರಾಧಿಕಾರಿಯನ್ನು ಹುಡುಕಿದ ಆನಂದ ಗುರುವಿನದ್ದಾದರೆ, ಶ್ರೇಷ್ಠ ಗುರುಗಳನ್ನು ಪಡೆದ ಧನ್ಯತಾ ಭಾವ ಶಿಷ್ಯನದ್ದಾಗಿತ್ತು. ಪರಿಶುದ್ಧ ಆಚಾರ, ಅನನ್ಯ ಭಕ್ತಿ, ದಾಸೋಹಭಾವ, ಅನುಪಮ ಸೇವೆ ಇವುಗಳೆಲ್ಲವನ್ನೂ ಗುರುತಿಸಿದ ಶ್ರೀ ಜಗದ್ಗುರು ಡಾ. ಸಂಗನಬಸವ ಮಹಾಸ್ವಾಮಿಗಳು 2021ರಲ್ಲಿ ಹಾಲಕೆರೆ ಶ್ರೀ ಅನ್ನದಾನೇಶ್ವರ ಸಂಸ್ಥಾನಮಠಕ್ಕೆ ಅಧಿಕಾರ ಅನುಗ್ರಹಿಸುತ್ತಾರೆ. ಆ ಹಸ್ತ ಸ್ಪರ್ಷದಿಂದ' ಗುರು ಮುಟ್ಟಿ ಗುರುವಾದರು'. ಗುರುಗಳು ಲಿಂಗೈಕ್ಯರಾದ ತರುವಾಯ ಅವರ ಇಚ್ಛಾನುಸಾರ ಶ್ರೀ ಜಗದ್ಗುರು ಕೊಟ್ಟುರುಸ್ವಾಮಿ ಸಂಸ್ಥಾನಮಠ ಹಂಪಿ–ಹೊಸಪೇಟೆ–ಬಳ್ಳಾರಿ ಭಕ್ತರು 2022 ಮಾರ್ಚ್–24 ರಂದು ಹೊಸಪೇಟೆ ಮಠದಲ್ಲಿ ಪಟ್ಟಾಧಿಕಾರವನ್ನು ನೆರವೇರಿಸಿ ಶ್ರೀಮಠದ ಸಂಪೂರ್ಣ ಅಧಿಕಾರವನ್ನು ದಯಪಾಲಿಸುತ್ತಾರೆ.

### ಪೂಜ್ಯರು ಕೈಗೊಂಡ ಅಭಿವೃದ್ಧಿ ಕಾರ್ಯಗಳು :

ಗುರುಗಳು ಲಿಂಗೈಕ್ಯರಾಗುವ ಮುನ್ನ ಪ್ರಾರಂಭಿಸಿದ ಎಲ್ಲ ಯೋಜನೆಗಳನ್ನೂ, ಕಾರ್ಯಗಳನ್ನೂ ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ. ಶ್ರೀ ಕೊಟ್ಟೂರುಸ್ವಾಮಿ ಮಠದ ಶಾಖಾಮಠಗಳಿಗೆ ಪೂಜ್ಯಗುರುಗಳು ನಿಯುಕ್ತಿಗೊಳಿಸಿದ ಉತ್ತರಾಧಿಕಾರಿಗಳಿಗೆ ಆಯಾ ಮಠಗಳ ಅಧಿಕಾರವನ್ನು ಹಂಚಿಕೆ ಮಾಡಿದ್ದಾರೆ. ದರೂರಿನ ಶ್ರೀ ಸಂಗನಬಸವೇಶ್ವರ ವಿರಕ್ತಮಠದ ನಿಯೋಜಿತ ಉತ್ತರಾಧಿಕಾರಿಗಳಾಗಿದ್ದ ಪೂಜ್ಯಶ್ರೀ ಕೊಟ್ಟೂರು ದೇಶಿಕರಿಗೆ 16–06–2022 ರಂದು ಪಟ್ಟಾಧಿಕಾರವನ್ನು ನೆರವೇರಿಸಿ ಅವರಿಗೂ ಜವಾಬ್ದಾರಿಯನ್ನು ನೀಡಿದ್ದಾರೆ. ಎಲ್ಲ ಶಾಲಾ ಕಾಲೇಜುಗಳನ್ನು ವ್ಯವಸ್ಥಿತವಾಗಿ ಮುನ್ನಡೆಸುತ್ತ, ಹೊಸಪೇಟೆ ಮತ್ತು ಬಳ್ಳಾರಿ ಮಠಗಳಲ್ಲಿ ತಲಾ 100ಕ್ಕಿಂತ ಅಧಿಕ ವಿದ್ಯಾರ್ಥಿಗಳಿಗೆ ಆಶ್ರಯನ್ನು ಕಲ್ಪಿಸಿ ಅನ್ನ–ಅಕ್ಷರ–ದಾಸೋಹ–ವಸತಿ ಯೋಜನೆಯನ್ನು ಮುಂದುವರೆಸಿದ್ದಾರೆ. ಇವುಗಳ ಜೊತೆಗೆ ಅರ್ಧಕ್ಕೆ ಬಂದಿದ್ದ ಕುರುಗೋಡು ಶಿಲಾ ಮಠವನ್ನು ಪೂರ್ಣಮಾಡಿ ದಿನಾಂಕ 03–03–2023 ರಂದು ಉದ್ಘಾಟನೆಗೊಳಿಸಿದ್ದಾರೆ. ಹೊಸಪೇಟೆಯಲ್ಲಿ ನೂತನವಾಗಿ ಶಿಲಾಮಠವನ್ನೂ, ಶ್ರೀ ಪ್ರೌಢದೇವರಾಯ ವಸತಿಯುತ ಪ್ರಸಾದ ನಿಲಯ, ಶ್ರೀ ಕಪ್ಪಿನ ಚೆನ್ನಬಸವೇಶ್ವರ ಅತಿಥಿಗೃಹ ಗಳನ್ನು ನಿರ್ಮಿಸಿ 2023ರಲ್ಲಿ ಲೋಕಾರ್ಪಣೆಗೊಳಿಸಿದ್ದಾರೆ. ಶ್ರೀ ಜಗದ್ಗುರು ಡಾ. ಸಂಗನಬಸವ ಮಹಾಸ್ವಾಮಿಗಳವರ ಯೋಗ–ಶಿವಯೋಗ–ತ್ಯಾಗದ ಬಲದಿಂದ ಮತ್ತು ತಮ್ಮ ಚತುರತೆ, ಸಂಘಟನೆ, ಕ್ರಿಯಾಶೀಲತೆಯಿಂದ ಸಮಾಜೋ ಧಾರ್ಮಿಕ ಧ್ಯೇಯೋದ್ದೇಶಗಳನ್ನು ಸಾಧಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದಾರೆ.

ಪೂಜ್ಯರಿಗೆ ಬಸವನೆಂದರೆ ಉಸಿರು, ಬಸವನೆಂದರೆ ಬರಹ, ಬಸವನೆಂದರೆ ನಡೆ–ನುಡಿ, ಹೀಗೆ ಬಸವನನ್ನು ತಮ್ಮ ಕಾಯ ಮತ್ತು ಕಾಯಕದ ಕಣ್ಣಾಗಿಸಿಕೊಂಡಿದ್ದಾರೆ. ತಾವು ಅಧಿಕಾರ ಹೊಂದಿದ ಕೆಲದಿನಗಳಲ್ಲಿಯೇ ಗದಗ ಮಹಾನಗರದಲ್ಲಿ ಬಸವಪುರಾಣವನ್ನು ಹಮ್ಮಿಕೊಂಡು ಅದನ್ನು ಯಶಸ್ವಿಗೊಳಿಸಿದ್ದಾರೆ. ಪ್ರತಿದಿನ ಬಸವಪುರಾಣ ಕೇಳಲು ಐದಾರು ಸಾವಿರಕ್ಕೂ ಮಿಕ್ಕು ಶ್ರೋತೃಗಳು ಬರುತ್ತಿದ್ದುದು ಗದಗ ಇತಿಹಾಸದಲ್ಲಿಯೇ ಮೊದಲಾಗಿದೆ.

ಹಾನಗಲ್ಲ ಶ್ರೀ ಕುಮಾರ ಮಹಾಶಿವಯೋಗಿಗಳ ಪ್ರಭಾವ ಪರಂಪರೆಯಲ್ಲಿ ಮತ್ತು ಗುರುಗಳ ತತ್ತ್ವ ಸಿದ್ಧಾಂತದಂತೆ ತಮ್ಮ ವಿರಕ್ತ ಬದುಕಿಗೆ ದಿವ್ಯತೆಯನ್ನು ತಂದುಕೊಂಡು ತ್ರಿಕಾಲ ಲಿಂಗಾನುರಾಗಿಗಳೂ, ನಿತ್ಯ ಸಂಚಾರಿ ಜಂಗಮರೂ ಆಗಿ ಭಕ್ತರ ಮನೋಮಾಲಿನ್ಯವನ್ನು ದೂರಮಾಡುತ್ತ ಉಳಿದ ಯುವಯತಿಗಳಿಗೆ ಮಾದರಿಯಾಗಿದ್ದಾರೆ.

ಎರಡು ಮುಖ್ಯ ಮಠಗಳ ಪಟ್ಟಾಧಿಕಾರ ವಹಿಸಿಕೊಂಡ ಮರುಕ್ಷಣವೇ ಹಲವು ಸಮಾಜೋಧಾರ್ಮಿಕ, ಶೈಕ್ಷಣಿಕ ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸಲು ಪ್ರಾರಂಭಿಸುತ್ತಾರೆ. ಶಿವಾನುಭಾವ, ಶಾಖಾಮಠಗಳ ಸಂಪನ್ಮೂಲ ಕ್ರೋಢೀಕರಣ, ಜೀರ್ಣೋದ್ಧಾರ, ದುರಸ್ತಿ, ಗ್ರಂಥಾಲಯ ಸ್ಥಾಪನೆ, ಹಸ್ತಪ್ರತಿ ಸಂಗ್ರಹಾಲಯಕ್ಕೊಂದು ವಿಶೇಷ ವ್ಯವಸ್ಥೆ, ಜಾತ್ರಾಮಹೋತ್ಸವಗಳು, ವಿಚಾರಗೋಷ್ಠಿಗಳು, ಪ್ರಸಾದ ನಿಲಯಗಳು, ಬಸವಜಯಂತಿ, ಸರ್ವಧರ್ಮ ಉಚಿತ ಸಾಮೂಹಿಕ ವಿವಾಹ ಸಮಾರಂಭ, ಸಾಮಾಜಿಕ ಜನಪಯೋಗಿ ಕಾರ್ಯಗಳು– ಹೀಗೆ ಹಲವು ಯೋಜನೆಗಳನ್ನು ತಮ್ಮ ಅಧಿಕಾರದ ಅಲ್ಪಾವಧಿಯಲ್ಲಿಯೇ ಪೂರೈಸುತ್ತಿದ್ದಾರೆ. ಪೂಜ್ಯ ಗುರುಗಳ ಪಟ್ಟಾಧಿಕಾರ ಸುವರ್ಣಮಹೋತ್ಸವದ ಸವಿನೆನಪಿಗಾಗಿ ಸಮಾಜದ ಎಲ್ಲ ಹಿರಿಯರ ಸಹಕಾರದಿಂದ ಹೊಸಪೇಟೆ ನಗರದಲ್ಲಿ 'ಶ್ರೀ ಬಸವೇಶ್ವರ ಸರ್ಕಲ್ ಹಾಗೂ ಪುತ್ಥಳಿ' ನಿರ್ಮಾಣವಾಗಲು ಪ್ರೇರಣೆಯಾಗಿದ್ದಾರೆ.

ಕಳೆದ ವರ್ಷ ಹಾಲಕೆರೆ ಮಠದಲ್ಲಿ ವಿದ್ಯಾರ್ಥಿಗಳಿಗಾಗಿಯೇ 'ಅಕ್ಷರ ಜಾತ್ರೆ' ಎಂಬ ವಿನೂತನ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ಇದರಲ್ಲಿ ಹತ್ತು ಸಾವಿರಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಪಾಲ್ಗೊಂಡು ಅದನ್ನೊಂದು ಸ್ಮರಣೀಯ ಗೊಳಿಸಿದ್ದಾರೆ. ಕೆಲದಿನಗಳ ಹಿಂದೆ ಬಳ್ಳಾರಿ ಶ್ರೀಮಠದಲ್ಲಿ ಹಾನಗಲ್ಲ ಕುಮಾರ ಶಿವಯೋಗಿಗಳ 157ನೇ ಹಾಗೂ ಶ್ರೀ ಜಗದ್ಗುರು ಡಾ. ಸಂಗನಬಸವ ಮಹಾಸ್ವಾಮಿಗಳವರ 86ನೇ ಜಯಂತಿ ಮಹೋತ್ಸವ ಅಂಗವಾಗಿ ಸುಂದರವಾದ ರಥವನ್ನು ನಿರ್ಮಿಸಿ ಮಹಿಳೆಯರಿಂದ ಎಳೆಸಿ ಲಿಂಗತಾರತಮ್ಯವನ್ನು ಅಳಿಸಿದ್ದಾರೆ.

ಸರ್ವಧರ್ಮದ ಅನುಯಾಯಿಗಳಲ್ಲಿ ಸಮಾನ ಅಭಿಮಾನವನ್ನು ಹೊಂದಿದ ಪೂಜ್ಯರು ಮಠದ ಯಾವುದೇ ಕಾರ್ಯಕ್ರಮವಿರಲಿ, ಅಲ್ಲಿ ಅನ್ಯ ಧರ್ಮದ ಅನುಯಾಯಿಗಳನ್ನೂ ಆಮಂತ್ರಿಸಿ ಗೌರವಿಸುತ್ತ ಬಂದಿದ್ದಾರೆ. ಮಠದ ಜಾತ್ರಾ ಸಮಾರಂಭವೊಂದರಲ್ಲಿ ಇಸ್ಲಾಂ ಧರ್ಮದ ಬಾಂಧವರು ಸಿಹಿ ಅಡುಗೆ ಮಾಡಿ ಸಾವಿರಾರು ಜನರಿಗೆ ಉಣಬಡಿಸಿದ್ದನ್ನು ಸ್ಮರಿಸಲೇಬೇಕಾಗುತ್ತದೆ.

### ಶಿಕ್ಷಣ ದಾಸೋಹ ಮತ್ತು ಗ್ರಂಥಪ್ರಕಾಶನ :

'ಸೋಹಂ ಎಂದೆನಿಸದೇ ದಾಸೋಂ ಎಂದೆನಿಸಯ್ಯಾ'– ಎಂಬ ಶರಣ ವಾಣಿಯನ್ನು ತಪ್ಪದೇ ಪರಿಪಾಲಿಸುವ ಪೂಜ್ಯರು ಶಿಕ್ಷಣದ ಬಗೆಗೆ ಅಪಾರವಾದ ಕಾಳಜಿಯನ್ನು ಹೊಂದಿದ್ದಾರೆ. ಬಡ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ ಅವರ ಶಿಕ್ಷಣಕ್ಕೆ ದಾರಿಪೀಪವಾಗಿದ್ದಾರೆ. ಭಾರತೀಯ ನಾಗರೀಕ ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳಿಗೆ ಉಚಿತವಾಗಿ ಓದಿಸುವ ಸಂಕಲ್ಪ ಕೈಗೊಂಡಿದ್ದಾರೆ. ಆಂದ್ರಪ್ರದೇಶ ಮತ್ತು ಕರ್ನಾಟಕದ ಗಡಿ ಭಾಗದಲ್ಲಿ ಪೂಜ್ಯ ಗುರುಗಳು ಪ್ರಾರಂಭಿಸಿದ ಗಡಿನಾಡು ಶಾಲೆಗೆ ಮತ್ತಷ್ಟು ಕಾಯಕಲ್ಪವನ್ನು ನೀಡಿ, ಉತ್ತಮ ಶಿಕ್ಷಕರನ್ನು ನೇಮಕ ಮಾಡಿಕೊಂಡು ಮಕ್ಕಳಿಗೆ ಉಚಿತವಾಗಿ ಮೌಲ್ಯಯುತ ಶಿಕ್ಷಣ ನೀಡುತ್ತಿದ್ದಾರೆ. ಶ್ರೀ ಕೊಟ್ಟೂರುಸ್ವಾಮಿ ಕಲ್ಯಾಣ ಕೇಂದ್ರ ಹೊಸಪೇಟೆ ಹಾಗೂ ಶ್ರೀ ಅನ್ನದಾನ ವಿಜಯ ವಿದ್ಯಾಪ್ರಸಾರಕ ಸಮಿತಿ ನರೇಗಲ್ಲ ಸಂಸ್ಥೆಗಳ ಅಡಿಯಲ್ಲಿ ನಡೆಯುತ್ತಿರುವ ಎಲ್ಲ ಶಿಕ್ಷಣ ಸಂಸ್ಥೆಗಳನ್ನು ಬಹು ಜತನವಾಗಿ ಕಾಪಾಡಿಕೊಂಡು ಉಳಿಸಿ ಬೆಳೆಸುತ್ತಿದ್ದಾರೆ. ಈ ಎರಡು ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸುಮಾರ ಐದಾರು ನೂರು ಬೋಧಕ ಸಿಬ್ಬಂದಿಗಳಲ್ಲಿ ಕೌಶಲ್ಯಾಭಿವೃದ್ಧಿಗಾಗಿ ನರೇಗಲ್ಲದಲ್ಲಿ ಶೈಕ್ಷಣಿಕ ಪುನಃಶ್ಚೇತನ ಶಿಬಿರವನ್ನು ಹಮ್ಮಿಕೊಂಡು ಶಿಕ್ಷಕರಲ್ಲಿ ನವೀನ ಬೋಧನಾ ವಿಧಾನ, ಕೌಶಲ್ಯ, ನಿರೂಪಣ ಕ್ರಮದಲ್ಲಿ ತಂತ್ರಗಾರಿಕೆ ಕ್ರಮಗಳನ್ನು ತಿಳಿಸಿ ಮಕ್ಕಳಿಗೆ ಉತ್ತಮ ಶಿಕ್ಷಣ ಸಿಗುವಂತೆ ಪ್ರೇರೆಪಿಸಿದ್ದಾರೆ. ಹೊಸಪೇಟೆ ಮಠದ ಆವರಣದಲ್ಲಿ ಹೇಮಕೂಟ ಕಿಂಡರ್ ಶಾಲೆಯನ್ನು ಪ್ರಾರಂಭಿಸಿ ಮಕ್ಕಳು ಚಿಕ್ಕವರಿದ್ದಾಗಲೇ ಸಂಸ್ಕಾರಯುತ ಶಿಕ್ಷಣ ನೀಡುತ್ತಿದ್ದಾರೆ. ಜೊತೆಗೆ ಸಾಹಿತ್ಯ ಪ್ರೇಮಿಗಳಾದ ಇವರು ತಮ್ಮ ಎಲ್ಲ ಮಠಗಳ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಒಂದಿಲ್ಲೊಂದು ಗ್ರಂಥವನ್ನು ಪ್ರಕಾಶಿಸುವುದರ ಮೂಲಕ ಕನ್ನಡ ಸಾಹಿತ್ಯ ಲೋಕಕ್ಕೆ ಅಮೂಲ್ಯ ಕೃತಿಗಳನ್ನು ಕೊಡುತ್ತಿದ್ದಾರೆ.




**ವಿಶೇಷ** ಇಂದು ಶ್ರೀ ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳ ಜನ್ಮದಿನ

### ಹೇಮಕೂಟ ತ್ರೈಮಾಸಿಕ ಪುನರಾರಂಭ :

ಶ್ರೀ ಜಗದ್ಗುರು ಡಾ. ಸಂಗನಬಸವ ಮಹಾಸ್ವಾಮಿಗಳು 1983ರಲ್ಲಿ ಹೊರತಂದ 'ಹೇಮಕೂಟ' ನಿಯತಕಾಲಿಕೆ ಕಾರಣಾಂತರಗಳಿಂದ ತನ್ನ ಸಾಧನಾಯಾನವನ್ನು ನಿಲ್ಲಿಸಿತ್ತು. ಶ್ರೀ ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು ಅಧಿಕಾರ ಹೊಂದಿದ ಮರುವರ್ಷವೇ ಅದನ್ನು ಪುನಶ್ಚೇನಗೊಳಿಸುವ ಉದ್ದೇಶದಿಂದ ನಾಡಿನ ಹೆಸರಾಂತ ವಿದ್ವಾಂಸರಾದ ಡಾ. ಮೃತ್ಯುಂಜಯ ರುಮಾಲೆ, ಡಾ. ಕೆ. ರವೀಂದ್ರನಾಥ ಅವರ ಸಂಪಾದಕತ್ವದಲ್ಲಿ ಹಾಗೂ ನನ್ನ ಸಹಸಂಪಾದಕತ್ವದಲ್ಲಿ ಕಳೆದ ಬಸವಜಯಂತಿಯ ಶುಭದಿನ (ಮೇ–2024) ತ್ರೈಮಾಸಿಕ ರೂಪದಲ್ಲಿ ಮರು ಲೋಕಾರ್ಪಣೆಗೊಳಿಸಿದ್ದಾರೆ. ಅದು ಪ್ರಾರಂಭಗೊಂಡ ಅಲ್ಪ ಸಮಯದಲ್ಲಿಯೇ ನಾಡಿನ ಸಹೃದಯರ, ಓದುಗರ, ಅಧ್ಯಯನಾಸಕ್ತ ವಿದ್ಯಾರ್ಥಿಗಳ ಮತ್ತು ಮಠಾಧಿಪತಿಗಳ ಗಮನ ಸೆಳೆದು ಮುನ್ನಿನಂತೆ ಹೊಸ ರೂಪದಲ್ಲಿ ಬರುತ್ತಿದೆ.

ಹೀಗೆ ಪೂಜ್ಯಶ್ರೀ ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು ತಮ್ಮ ಅಲ್ಪ ಅಧಿಕಾರವಾಧಿಯಲ್ಲಿ ಮಾಡುತ್ತಿರುವ ಸಮಾಜಪರ ಕಾರ್ಯಗಳು ಸುವಿಶಾಲವಾಗಿವೆ. ಜನರಲ್ಲಿ ಧಾರ್ಮಿಕ ಪ್ರಜ್ಞೆಯನ್ನು ಸ್ಥಾಪಿಸುವ ಮತ್ತು ಪ್ರಜ್ಞಾಪೂರ್ವಕ ಬದುಕನ್ನು ರಚಿಸುವ ನಿಟ್ಟಿನಲ್ಲಿ ಜಾತ್ಯತೀತ ಬದುಕಿನ ಮಹತ್ವವನ್ನು ನಾಡಿಗೆ ತಿಳಿಸುತ್ತಿದ್ದಾರೆ.

ಬಸವಾದಿ ಶರಣರ ಕಾಯಕ–ದಾಸೋಹ ತತ್ತ್ವಗಳನ್ನು ನಿಜಾಚರಣೆಗೆ ತಂದು, ಭಕ್ತರು ಸತ್ಯಶುದ್ಧ ಕಾಯಕದಲ್ಲಿ ನಿರತರಾಗುವಂತೆ ಮಾಡುತ್ತಿದ್ದಾರೆ. ನಾಡು ಬಯಸುತ್ತಿದ್ದ ಓರ್ವ ಸಾಧಕ ಸ್ವಾಮಿಗಳನ್ನು ಈ ಎರಡು ಮಠಗಳು ಪಡೆದಿವೆ. ಪೂಜ್ಯರು ಇನ್ನೂ ಸಾವಿರಾರು ಕನಸುಗಳನ್ನು ಕಂಡಿದ್ದಾರೆ. ಅವರೆಲ್ಲ ಕನಸುಗಳು, ಯೋಜನೆಗಳು, ಆಲೋಚನೆಗಳು ಸಾಕಾರಗೊಂಡು ಸಮಾಜಕ್ಕೆ, ನಾಡಿನ ಅಭಿವೃದ್ಧಿಗೆ, ಧರ್ಮ ಸಾಮರಸ್ಯಕ್ಕೆ ಕಾರಣವಾಗಲೆಂದು ಪೂಜ್ಯರ ಜನ್ಮದಿನದ ಸಂದರ್ಭದಲ್ಲಿ ಪ್ರಾರ್ಥಿಸುತ್ತೇನೆ.

# ಹಂಪಿ ಟೈಮ್ಸ್
HAMPI TIMES
ಕನ್ನಡ ದಿನಪತ್ರಿಕೆ
KANNADA DAILY
ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
epaper.hampitimes.com | e-mail: hampitimes@gmail.com | M:94486 33038

ಸಂಪುಟ:02 Volume:02 • ಸಂಚಿಕೆ: 93 Issue: 93 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 06.10.2024 • ಭಾನುವಾರ Sunday • ಪುಟ:08 Page:08 • ಬೆಲೆ:2 Rs:2




HAMPI TIMES No.1 Leading Local News Paper
90,000 E-PAPER READERS
94486 33038
NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201



ADVERTISE WITH US
REACH
THOUSANDS OF POTENTIAL CUSTOMERS
HAMPI TIMES DAILY
Classifieds ✓
Display ✓
Take Advantage of Our Special Discounted rates
For More Information 9448633038 www.hampitimes.com



## ನಿತ್ಯ ಪಂಚಾಂಗ

ಮಾಸ: ಆಶ್ವೀಜ । ಸಂವತ್ಸರ: ಕ್ರೋಧಿ

**06–10–2024 – ಭಾನುವಾರ**

| | |
|---|---|
| ತಿಥಿ | : ತೃತೀಯ |
| ಪಕ್ಷ | : ಶುಕ್ಲ |
| ನಕ್ಷತ್ರ | : ವಿಶಾಖ |
| ಯೋಗ | : ಪ್ರೀತಿ |
| ಕರಣ | : ಗರಜ |
| ಸೂರ್ಯೋದಯ | : 06:21:29 |
| ಸೂರ್ಯಾಸ್ತ | : 18:08:00 |
| ರಾಹು ಕಾಲ | : 16:40–18:08 |
| ಯಮಘಂಡ ಕಾಲ | : 12:15–13:43 |
| ಗುಳಿಕ ಕಾಲ | : 15:11–16:40 |

## ತುಂಗಭದ್ರಾ ನೀರಿನ ಮಟ್ಟ



ಶನಿವಾರ : 05–10–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1632.00 ಅಡಿ |
| ಒಳ ಹರಿವು | 13865 ಕ್ಯುಸೆಕ್ |
| ಹೊರ ಹರಿವು | 13625 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 101.773 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1616.96 ಅಡಿ |
| ಒಳ ಹರಿವು | 3935 ಕ್ಯುಸೆಕ್ |
| ಹೊರ ಹರಿವು | 9556 ಕ್ಯುಸೆಕ್ |
| ಸಾಮರ್ಥ್ಯ | 53.213 ಟಿಎಂಸಿ |


**ಸುದ್ದಿ, ಜಾಹೀರಾತು ಕಚೇರಿ**
ವಿಜಯನಗರ ಜಿಲ್ಲೆಯ ಸುದ್ದಿ ಜಾಹೀರಾತು ಪ್ರಕಟಣೆಗಾಗಿ ಈ ಕೆಳಗಿನ ಕಚೇರಿ ವಿಳಾಸ ಸಂಪರ್ಕಿಸಿ
ಹಂಪಿ ಟೈಮ್ಸ್
ವಾಲ್ಮೀಕಿ ಸರ್ಕಲ್ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
94486 33038
Email: hampitimes@gmail.com


# ಶತಮಾನೋತ್ಸವ ಸಂಭ್ರಮಕ್ಕೆ ಸಿದ್ಧ

## ವಿ.ಪ್ರಾ.ಗ್ರಾ.ಕೃ.ಸ.ಸಂ.ನಿ ಸಂಘದ ಅಧ್ಯಕ್ಷ ಸಿ.ಹಾಶ್ಯಾಂ ಹೇಳಿಕೆ । ಸಹಕಾರಿ ಸಚಿವ ರಾಜಣ್ಣ ಉದ್ಘಾಟನೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಗ್ರಾಮದ ವಿ.ಪ್ರಾ.ಗ್ರಾ.ಕೃ.ಸ.ಸಂ.ನಿ. ಶತಮಾನೋತ್ಸವ ಸಂಭ್ರಮಕ್ಕೆ ಕ್ಷಣಗಣನೆ ಆರಂಭಗೊಂಡಿದ್ದು, ಗ್ರಾಮ ಸ್ವಚ್ಛತೆಯೊಂದಿಗೆ ಮದುವಣಗಿತ್ತಿಯಂತೆ ಸಿದ್ಧಗೊಳ್ಳುತ್ತಿದೆ. ಗ್ರಾಮದಲ್ಲಿ ವೇದಿಕೆ ಸಿದ್ಧತೆ ಜೋರಾಗಿದ್ದು, ಶ್ರೀಗಳನ್ನು, ಸಚಿವರು, ಶಾಸಕರು ಮತ್ತು ಸಹಕಾರಿಗಳನ್ನು ಕುಂಭದೊಂದಿಗೆ ಆಹ್ವಾನಿಸಲು ಮಹಿಳೆಯರು ಸನ್ನದ್ಧರಾಗುತ್ತಿದ್ದಾರೆ. ಗ್ರಾಮದಲ್ಲಿ ರಸ್ತೆ ಅಕ್ಕಪಕ್ಕ ಬ್ಯಾನರ್‌ಗಳ ರಾರಾಜಿಸುತ್ತಿವೆ. ಗ್ರಾಮದಲ್ಲಿ ಹಬ್ಬದ ಸಂಭ್ರಮವೆಂಬಂತೆ ಸಿದ್ಧತೆ ನಡೆದಿದ್ದು, ಗಣ್ಯರ ಆಗಮನದ ದಾರಿಯನ್ನು ಸಕಲ ತಯಾರಿಯೊಂದಿಗೆ ಕಾಯತೊಡಗಿದ್ದಾರೆ. ಶಾಲಾ ಆವರಣದಲ್ಲಿ ಬೃಹತ್ ಪೆಂಡಾಲ್ ಹಾಕಲಾಗಿದ್ದು, ಪಕ್ಕದಲ್ಲೇ ಬಸವಣ್ಣ ದೇವಸ್ಥಾನದ ಆವರಣದಲ್ಲಿ ಭೋಜನ ವ್ಯವಸ್ಥೆಗೆ ಸಿದ್ದತೆ ನಡೆದಿದೆ. ಭಾನುವಾರ ನಡೆಯುವ ಶತಮಾನದ ಸಂಭ್ರಮಕ್ಕೆ ಸಾವಿರಾರು ಜನರು ಸಾಕ್ಷಿಯಾಗಲಿದ್ದಾರೆ.

ತಾಲೂಕಿನ ನಾಗೇನಹಳ್ಳಿ ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘ ನಿ., ನೂರು ವರ್ಷಗಳ ಪೂರೈಸಿದ ನಿಮಿತ್ತ ಅ.6 ರಂದು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಶತಮಾನೋತ್ಸವ ಸಮಾರಂಭ ಹಮ್ಮಿಕೊಂಡಿದೆ ಎಂದು ಸಂಘದ ಅಧ್ಯಕ್ಷ ಸಿ.ಹಾಶ್ಯಾಂ ತಿಳಿಸಿದ್ದಾರೆ.

ಕೊಪ್ಪಳ ಗವಿಮಠದ ಶ್ರೀ ಮ.ನಿ.ಪ್ರ.ಅಭಿನವ ಗವಿಸಿದ್ಧೇಶ್ವರ ಮಹಾಸ್ವಾಮಿಗಳು, ಶ್ರೀ ಜಗದ್ಗುರು ಕೊಟ್ಟೂರು ಸಂಸ್ಥಾನಂಠದ ಜಗದ್ಗುರು ಶ್ರಿ ಮ.ನಿ.ಪ್ರ.ಬಸವಲಿಂಗ ಮಹಾಸ್ವಾಮಿಗಳು ಮತ್ತು ಮಹ್ಮದ್ ನಗರ ನಗರಗಡ್ಡಿ ಮಠದ ಶ್ರೀ ಮ.ನಿ.ಪ್ರ. ಶಾಂತಲಿಂಗೇಶ್ವರ ಮಹಾಸ್ವಾಮಿಗಳು ದಿವ್ಯ ಸಾನ್ನಿಧ್ಯವಹಿಸುವರು.

ಸಹಕಾರ ಸಚಿವ ಕೆ.ಎನ್.ರಾಜಣ್ಣನವರು ಶಮಾನೋತ್ಸವ ಶಿಲಾನ್ಯಾಸದ ಉದ್ಘಾಟನೆ ನೆರವೇರಿಸುವರು. ವಸತಿ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ವಕ್ಫ್ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ಝಡ್ ಜಮೀರ್ ಅಹ್ಮದ್ ಖಾನ್ ಶತಮಾನೋತ್ಸವ ಸ್ಮರಣ ಸಂಚಿಕೆ ಬಿಡುಗಡೆ ಮಾಡಲಿದ್ದಾರೆ. ಶಾಸಕ ಎಚ್.ಆರ್.ಗವಿಯಪ್ಪ ಕಾರ್ಯಕ್ರಮದ ಅಧ್ಯಕ್ಷತೆ ಹಾಗೂ ಕಂಪ್ಯೂಟರ್ ಕೊಠಡಿ ಉದ್ಘಾಟಿಸಲಿದ್ದಾರೆ., ಸಂಸದ ತುಕಾರಾಂ ಶತಮಾನೋತ್ಸವದ ನೆನಪಿನ ಕಾಣಿಕೆ ಬಿತರಿಸಲಿದ್ದಾರೆ. ಮುಖ್ಯ ಅತಿಥಿಗಳಾದಿ ಸಂಸದರಾದ ರಾಜಶೇಖರ ಹಿಟ್ನಾಳ್, ಪ್ರಭಾ ಮಲ್ಲಿಕಾರ್ಜುನ, ರಾಜ್ಯ ಸಭಾ ಸದಸ್ಯ ನಾಸೀರ್ ಹುಸೇನ್, ಶಾಸಕರಾದ ಜಿ.ಎನ್. ಗಣೇಶ, ನಾರಾ ಭರತರೆಡ್ಡಿ, ಲತಾ ಮಲ್ಲಿಕಾರ್ಜುನ, ಎನ್.ಟಿ.ಶ್ರೀನಿವಾಸ, ನೇಮಿರಾಜ್ ನಾಯ್ಕ್, ಎಲ್.ಕೃಷ್ಣ ನಾಯ್ಕ್, ಬಿ.ನಾಗೇಂದ್ರ, ಬಿ.ಎಂ.ನಾಗರಾಜ, ಮಾಜಿ ಸಚಿವ ಬಿ.ಎಸ್.ಆನಂದಸಿಂಗ್, ವಿಧಾನ ಪರಿಷತ್ ಸದಸ್ಯರಾದ ವೈ.ಎಂ.ಸತೀಶ್, ಅಮರನಾಥ ಪಾಟೀಲ್, ಶಶೀಲ್ ನಮೋಶಿ, ಮಾಜಿ ಶಾಸಕ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿರಾಜ್ ಶೇಖ್, ರಾಜ್ಯ ಹಾಲು ಒಕ್ಕೂಟದ ಅಧ್ಯಕ್ಷ ಎಲ್.ಬಿ.ಪಿ.ಭೀಮಾನಾಯ್ಕ್, ಕೆ.ಪಿ.ಸಿ.ಸಿ. ಪ್ರಧಾನ ಕಾರ್ಯದರ್ಶಿ ಬಿ.ಎಲ್.ರಾಣಿ ಸಂಯುಕ್ತ, ಹುಡಾ ಅಧ್ಯಕ್ಷ ಎಚ್.ಎನ್.ಮಹ್ಮದ್ ಇಮಾಮ್ ನಿಯಾಜಿ, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ, ಎಸ್ಪಿ ಬಿ.ಎಲ್.ಹರಿಬಾಬು, ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಕೆ.ತಿಪ್ಪೇಸ್ವಾಮಿ, ಜಿ.ಪಂ.ಸಿಇಒ ಎನ್.ಎಂ.ಅಕ್ರಮ್ ಅಲಿ ಷಾ, ಸಹಾಯಕ ಆಯುಕ್ತ ಪಿ.ವಿವೇಕಾನಂದ, ತಹಶೀಲ್ದಾರ್ ಶೃತಿ ಎಂ.ಮಳ್ಳಪ್ಪಗೌಡ, ತಾಪಂ ಇಒ ಡಿ.ಲಕ್ಷ್ಮೀಕಾಂತ, ನ್ಯಾಷನಲ್ ಅಗ್ರಿಕಲ್ಚರಲ್ ಕೋ–ಆಪರೇಟಿವ್ ಮಾರ್ಕೆಂಟಿಂಗ್ ಫೆಡರೇಷನ್ ದೆಹಲಿಯ ಸಿದ್ದಪ್ಪ ಎಸ್ ಹೊಟ್ಟಿ, ಸಹಕಾರ ಸಂಘಗಳ ಜಂಟಿ ನಿಬಂಧಕರು ಕಲಬುರಗಿಯ ವಿಶ್ವನಾಥ ಮಹಾಂತಪ್ಪ ಮಲಕುಡು ಕೆಪಿಎಸ್, ಸಹಕಾರ ಸಂಘಗಳ ನಿಬಂಧಕ ಬಳ್ಳಾರಿಯ ಬಿ.ಎ.ಕೇಸರಿಮಠ, ಬಳ್ಳಾರಿ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆಯ ಉಪನಿಬಂಧಕ ಜೆ.ಎಸ್.ವಿನಾಯಕ, , ಹೊಸಪೇಟೆಯ ಸಹಕಾರ ಸಂಘಗಳ ಸಹಾಯಕ ನಿಬಂಧಕ ಟಿ.ಎಸ್. ರವಿಕುಮಾರ್, ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಚೊಕ್ಕಬಸವನಗೌಡ, ಮಾಜಿ ಶಾಶಕ ಟಿ.ಎಂ. ಚಂದ್ರಶೇಖರಯ್ಯಸ್ವಾಮಿ, ಬಿಡಿಸಿಸಿ ಬ್ಯಾಂಕಿನ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಬಿ.ಜಯಪ್ರಕಾಶ, ಸಮಾಜ ಸೇವಕ ಬಿ.ಎಸ್.ದೀಪಕ್‌ಸಿಂಗ್, ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಮಾಜಿ ಅಧ್ಯಕ್ಷ ಬಂಡೆ ರಂಗಪ್ಪ, ನಗರಸಭೆ ಮಾಜಿ ಅಧ್ಯಕ್ಷ ಆರ್.ಕೊಟ್ರೇಶ್, ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಎಲ್.ಎಸ್.ಆನಂದ, ಜಿಪಂ ಮಾಜಿ ಸದಸ್ಯ ಎಲ್.ಸಿದ್ದನಗೌಡ, ನಾಗೇನಹಳ್ಳಿ ಗ್ರಾಪಂ ಅಧ್ಯಕ್ಷ ಎಂ.ದುರುಗಪ್ಪ, ಬಿಡಿಸಿಸಿ ಬ್ಯಾಂಕ್ ಮಾಜಿ ನರ್ದೇಶಕ ಬಿ.ಚಂದ್ರಶೇಖರ, ಪ್ರಾ.ಕೃಇ.ಪ.ಸ.ಸಂಘ ನಾಗೇನಹಳ್ಳಿ ಮಾಜಿ ಅಧ್ಯಕ್ಷ ದೇವರಮನಿ ಜಂಬಣ್ಣ, ಪ್ರಾ.ಕೃಇ.ಪ.ಸ.ಸಂಘ ನಾಗೇನಹಳ್ಳಿ ಮಾಜಿ ನಿರ್ದೇಶಕ ಸಿ.ಇಬ್ರಾಹಿಂ ಸಾಬ್, ಪ್ರಾ.ಕೃಇ.ಪ.ಸ.ಸಂಘ ನಾಗೇನಹಳ್ಳಿ ಮಾಜಿ ಅಧ್ಯಕ್ಷ ಟಿ.ಆರ್.ಯರಿಸ್ವಾಮಿ, ಪ್ರಾ.ಕೃಇ.ಪ.ಸ.ಸಂಘ ನಾಗೇನಹಳ್ಳಿ ಮಾಜಿ ಸದಸ್ಯ ಸಣ್ಣಕ್ಕಿ ಹನುಮಂತಪ್ಪ, ನಾಗೇನಹಳ್ಳಿ ಗ್ರಾಪಂ ಉಪಾಧ್ಯಕ್ಷೆ ತಳವಾರ ಸವಿತಾ, ಗ್ರಾಪಂ ಸದಸ್ಯರಾದ ಕೆ.ಅನ್ವರ ಬಾಷ, ಕೆ.ನಾಗಭೂಷಣ,ಎಚ್.ಎನ್.ಚನ್ನಬಸಪ್ಪ, ಟಿ.ಹೇಮಗಿರಿ, ಗುಜ್ಜಲ ಪಕ್ಕೀರಪ್ಪ, ಬಿ.ಮಹ್ಮದ್ ರಫೀಕ್, ಡಿ.ಹುಸೇನಪ್ಪ, ಎಲ್.ಭದ್ರಾನಾಯ್ಕ್, ಪಿ.ಭಾರತಿ ಪಾಟೀಲ್, ಕೆ.ರಾಹತ್ ಜಹಾನ್,ವೈ.ಜ್ಯೋತಿ,ಎಸ್.ಹುಲಿಗೆಮ್ಮ,ಎಚ್.ಟಿ.ಲಕ್ಷ್ಮೀ, ಎಲ್.ಲಕ್ಷ್ಮೀಬಾಯಿ, ಕೆ.ಮಾರೆಕ್ಕ, ಎಲ್.ದೀಪಾಬಾಯಿ, ಪಿಡಿಒ ಶಮೀಮ್ ಬಾನು ದಲಾಯತ್, ಕಾರ್ಯದರ್ಶಿ ಟಿ.ಕೆ.ವೀರಣ್ಣ ಹಾಗೂ ನಾಗೇನಹಳ್ಳಿ ವಿ.ಪ್ರಾ.ಗ್ರಾ.ಕೃ.ಸಂ.ಸಂ.ನಿ ಆಡಳಿತ ಮಂಡಳಿ ಉಪಾಧ್ಯಕ್ಷ ಎಚ್.ವಿ.ಹನುಮಂತಪ್ಪ, ನಿರ್ದೇಶಕರಾದ ಅಲ್ಲಾಭಕ್ಷಿ.ಕೆ., ಡಿ.ಚನ್ನಬಸಪ್ಪ, ಎಸ್.ಕಳಕಪ್ಪ, ಡಾ.ಟಿ.ಆರ್.ಶ್ರೀನಿವಾಸ, ಕರಡಿ ತಿಮ್ಮಪ್ಪ, ಪಿ.ಷಡಾಕ್ಷರಿಗೌಡ, ಬಿ.ವೆಂಕಟೇಶ, ಎಚ್.ಬಸವರಾಜ, ಡಿ.ಲಲಿತಮ್ಮ, ಎ.ಆರ್.ದೇವಕಮ್ಮ, ಬ್ಯಾಂಕ್ ಪ್ರತಿನಿಧಿ ಎಚ್.ಜಿ.ಪುರೋಹಿತ್. ಬಿಡಿಸಿಸಿ ಬ್ಯಾಂಕ್ ಕ್ಷೇತ್ರಾಭಿವೃದ್ಧಿ ಅಧಿಕಾರಿ ಬಿ.ಜಂಬಯ್ಯ ಉಪಸ್ಥಿತರಿರಲಿದ್ದಾರೆ ಸಂಘದ ಸಿಬ್ಬಂದಿ ವರ್ಗ, ಶಾಲಾ ಎಸ್ಡಿಎಂಸಿ ಪದಾಧಿಕಾರಿಗಳು, ಗ್ರಾಮ ಮಟ್ಟದ ಆರೋಗ್ಯ, ಅಂಗನವಾಡಿ, ಆಶಾ ಕಾರ್ಯಕರ್ತರು, ಮತ್ತು ಗ್ರಾಮದ ಹಿರಿಯ ಮುಖಂಡರು, ಯುವಕರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದ್ದಾರೆ.



## ಎಸ್‌ಎಸ್‌ಎಲ್‌ಸಿ ಪ್ರಶ್ನೋತ್ತರಗಳ ಸರಣಿಗೆ ವಿದ್ಯಾರ್ಥಿಗಳ ಅನಿಸಿಕೆಗಳು

### ಪ್ರಶ್ನೋತ್ತರಗಳು, ಚಿತ್ರಗಳು, ಸೂತ್ರಗಳು ಕಲಿಕೆಗೆ ಸಹಕಾರಿಯಾಗಿವೆ



**'ಹಂಪಿಟೈಮ್ಸ್'** ಪತ್ರಿಕೆಯಲ್ಲಿ ಬರುವ ಪ್ರಶ್ನೋತ್ತರಗಳನ್ನು ಓದುವುದರಿಂದ ಹೆಚ್ಚು ಸ್ಕೋರ್ ಮಾಡಬಹುದೆಂಬ ಆತ್ಮವಿಶ್ವಾಸ ಬೆಳೆದಿದೆ. ಗಣಿತ, ವಿಜ್ಞಾನ ಹಾಗೂ ಇಂಗ್ಲೀಷ್ ವಿಷಯದಲ್ಲಿ ನೀಡುವ ಪ್ರಶ್ನೋತ್ತರಗಳು, ಚಿತ್ರಗಳು, ಸೂತ್ರಗಳು ಕಲಿಕೆಗೆ ತುಂಬಾ ಸಹಕಾರಿಯಾಗಿವೆ. ಅದೆಲ್ಲಕ್ಕಿಂತ ಹೆಚ್ಚಾಗಿ 'ಮನಸ್ಸು ಮಾಡು, ಕರ್ತವ್ಯ ನಿಷ್ಠನಾಗು, ಕಾದು ನೋಡು' ಎಂಬ ವಾಕ್ಯವು ಅರ್ಥಗರ್ಭಿತವಾಗಿದ್ದು, ಓದಲು ಸ್ಫೂರ್ತಿ ನೀಡಿದೆ. ಹಂಪಿಟೈಮ್ಸ್ ಪತ್ರಿಕೆಗೆ ಹಾಗೂ ವಿಷಯವಾರು ಪ್ರಶ್ನೋತ್ತರಗಳನ್ನು ತಿಳಿಸುತ್ತಿರುವ ಮಾರ್ಗದರ್ಶಿ ಶಿಕ್ಷಕರಿಗೆ ತ್ಯಾಂಕ್ಯೂ.

– ಎಂ.ಎಂ. ನೀಲಾ 10ನೇ ತರಗತಿ.
ಸರ್ಕಾರಿ ಪ್ರೌಢಶಾಲೆ ಬಸರಕೋಡು. ಹ.ಬೊ.ಹಳ್ಳಿ(ತಾ)

**ವಿದ್ಯಾರ್ಥಿಗಳು, ಪಾಲಕರು, ಶಿಕ್ಷಕರು ನಿಮ್ಮ ಅಭಿಪ್ರಾಯಗಳನ್ನು ಭಾವಚಿತ್ರದೊಂದಿಗೆ ಕಳುಹಿಸಬಹುದು.**
M: 9448633038 - Email: hampitimes@gmail.com

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi
ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು
ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಸಮಾಜ ವಿಜ್ಞಾನ

### ಭೂಗೋಳ ಶಾಸ್ತ್ರ; ಅಧ್ಯಾಯ: 13 ಭಾರತದ ಅರಣ್ಯಗಳು

**1) ಭಾರತದಲ್ಲಿ ಅತಿ ಕಡಿಮೆ ಅರಣ್ಯ ಪ್ರದೇಶವನ್ನು ಹೊಂದಿರುವ ರಾಜ್ಯ ಯಾವುದು ?**
ಉತ್ತರ:– ಹರಿಯಾಣ

**2) ಭಾರತದಲ್ಲಿ ಅತಿ ಕಡಿಮೆ ಅರಣ್ಯ ಪ್ರದೇಶವನ್ನು ಹೊಂದಿರುವ ರಾಜ್ಯ ಯಾವುದು ?**
ಉತ್ತರ:– ಮಧ್ಯಪ್ರದೇಶ

**3) ಭಾರತದಲ್ಲಿ ಸ್ಥಾಪಿತವಾದ ಮೊದಲ ರಾಷ್ಟ್ರೀಯ ಉದ್ಯಾನವನ ಯಾವುದು?**
ಉತ್ತರ:– ಉತ್ತರಖಂಡದ ಜಿಮ್ ಕಾರ್ಬೆಟ್ ರಾಷ್ಟ್ರೀಯ ಉದ್ಯಾನವನ

**4) ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ಇರುವ ರಾಜ್ಯ ಯಾವುದು ?**
ಉತ್ತರ:– ಕರ್ನಾಟಕ

**5) ನದಿ ಮುಖಜ ಭೂಮಿಯಲ್ಲಿ ಕಂಡುಬರುವ ಅರಣ್ಯದ ವಿಧ ಯಾವುದು?**
ಉತ್ತರ:– ಮ್ಯಾಂಗ್ರೋವ್ ಅರಣ್ಯಗಳು

**6) ಉಷ್ಣವಲಯದ ಎಲೆ ಉದುರುವ ಕಾಡುಗಳನ್ನು ಮಾನ್ಸೂನ್ ಕಾಡುಗಳು ಎಂದು ಕರೆಯುವರು ಏಕೆ?**
ಉತ್ತರ:– ವರ್ಷದ ನಿರ್ದಿಷ್ಟ ಒಣಹವೆಯ ಋತುವಿನಲ್ಲಿ ಎಲೆ ಉದುರಿಸುವುದರಿಂದ ಮಾನ್ಸೂನ್ ಕಾಡುಗಳು ಎನ್ನುವರು.

**7) ಅರಣ್ಯ ಸಂರಕ್ಷಣೆ ಎಂದರೇನು?**
ಉತ್ತರ:– ಅರಣ್ಯಗಳನ್ನು ಮಾನವ ಪ್ರಾಣ ಮತ್ತು ನೈಸರ್ಗಿಕ ವಿಪತ್ತುಗಳಿಂದ ರಕ್ಷಣೆಮಾಡುವುದನ್ನು ಅರಣ್ಯ ಸಂರಕ್ಷಣೆ ಎನ್ನುವರು.

**8) ಸುಂದರಬನ್ ಎಂದರೇನು?**
ಉತ್ತರ:– ಗಂಗಾ ನದಿಯ ಮುಖಜಭೂಮಿಯಲ್ಲಿ ಸುಂದರಿ ಮರಗಳು ಹೇರಳವಾಗಿರುವುದರಿಂದ ಸುಂದರಬನ್ ಎನ್ನುವರು.

**9) ಭಾರತದ ಪ್ರಥಮ ಜೀವಿಗೋಳ ಮೀಸಲು ಪ್ರದೇಶ ಯಾವುದು?**
ಉತ್ತರ:– ನೀಲಗಿರಿ ಪ್ರದೇಶ

**10) ಅರಣ್ಯ ನಾಶಕ್ಕೆ ಕಾರಣಗಳನ್ನು ಪಟ್ಟಿ ಮಾಡಿ**
* ವ್ಯವಸಾಯದ ವಿಸ್ತರಣೆ, * ರಸ್ತೆಗಳು ಮತ್ತು ರೈಲು ಮಾರ್ಗಗಳು ನಿರ್ಮಾಣ * ನೀರಾವರಿ ಯೋಜನೆಗಳ ನಿರ್ಮಾಣ * ಕಾಡ್ಗಿಚ್ಚು.
* ಗಣಿಗಾರಿಕೆ. * ಹೈನುಗಾರಿಕೆ

**11) ಅರಣ್ಯ ಸಂರಕ್ಷಣಾ ವಿಧಾನಗಳು ಯಾವುವು?**
* ಘರ್ಷಿತ ಮರಗಳನ್ನು ತೆಗೆಯುವುದು. * ಮರಗಳಿಗೆ ತಗಲುವ ರೋಗ ನಿಯಂತ್ರಣ.* ಸಸಿ ನೆಡುವುದು * ಬೀಜ ಹರಡುವುದು. * ಮರ ಕಡಿಯುವುದನ್ನು ನಿಯಂತ್ರಿಸುವುದು. * ಪ್ರಾಣಿಗಳ ಮೇಯಿಸುವಿಕೆ ನಿಯಂತ್ರಣ.
* ಸಾರ್ವಜನಿಕ ಮರ ನೆಡಲು ಪ್ರೋತ್ಸಾಹ.

### ಸಮಾಜ ಶಾಸ್ತ್ರ : ಅಧ್ಯಾಯ 9 ದುಡಿಮೆ ಮತ್ತು ಆರ್ಥಿಕ ಜೀವನ

**1) ಕೇಂದ್ರ ಸರ್ಕಾರ ಸಮಾನ ವೇತನ ಕಾಯ್ದೆಯನ್ನು ಜಾರಿಗೆ ತಂದ ವರ್ಷ ಯಾವುದು?**
ಉತ್ತರ:– 1976

**2) ದುಡಿಮೆ ಎಂದರೇನು?**
ಉತ್ತರ:– ವ್ಯಕ್ತಿಯೋರ್ವನ ಶಕ್ತಿಯ ವ್ಯಯದಿಂದ ಅಥವಾ ಪರಿಶ್ರಮದಿಂದ ಆತನಿಗೆ ಆರ್ಥಿಕ ಪ್ರತಿಫಲ ಸಿಗುವುದನ್ನು ದುಡಿಮೆ ಎನ್ನುವರು.

**3) ಶ್ರಮ ವಿಭಜನೆ ಎಂದರೇನು?**
ಉತ್ತರ:– ಒಂದು ಕೆಲಸವನ್ನು ಜನರು ತಮ್ಮ ಆಸಕ್ತಿ, ಅಭಿರುಚಿ, ಸಾಮರ್ಥ್ಯ, ವಯಸ್ಸು, ವಿಶೇಷ ಪರಿಣತಿ ಕೌಶಲ್ಯ, ಹಾಗೂ ಲಿಂಗಬೇಧಗಳ ಮೇಲೆ ಹಂಚಿಕೊಂಡು ಮಾಡುವುದು.

**4) ನಿರುದ್ಯೋಗ ಎಂದರೇನು?**
ಉತ್ತರ:– ದುಡಿಯುವ ವಯಸ್ಸು, ಸಾಮರ್ಥ್ಯ, ಆಸಕ್ತಿ, ಅರ್ಹತೆ, ಇದ್ದರೂ ಉದ್ಯೋಗ ಸಿಗದ ಪರಿಸ್ಥಿತಿಯಾಗಿದೆ

**5) ನಿರುದ್ಯೋಗಕ್ಕೆ ಕಾರಣಗಳನ್ನು ತಿಳಿಸಿರಿ**
ಉತ್ತರ:– * ಅಧಿಕ ಜನಸಂಖ್ಯೆ. * ಯಾಂತ್ರಿಕರಣ. * ಶ್ರಮ ವಿಭಜನೆ. * ಸಾಮಾಜಿಕ ಅಸಮಾನತೆ. * ಬಂಡವಾಳ ಕೊರತೆ. * ಅನಕ್ಷರತೆ.

**6) ನಿರುದ್ಯೋಗದ ಪರಿಣಾಮಗಳನ್ನು ಪಟ್ಟಿ ಮಾಡಿರಿ**
ಉತ್ತರ:– * ಬಡತನ.* ಅನಾರೋಗ್ಯ.* ಭ್ರಷ್ಟಾಚಾರ. * ಕೌಟುಂಬಿಕ ವಿಘಟನೆ. * ಮೋಸ. * ವಂಚನೆ. * ಕಳ್ಳತನ. * ವ್ಯಭಿಚಾರ

**7) ನಿರುದ್ಯೋಗ ಸಮಸ್ಯೆಗೆ ಪರಿಹಾರಗಳನ್ನುತಿಳಿಸಿರಿ**
ಉತ್ತರ:– * ಗುಡಿ ಕೈಗಾರಿಕೆಗೆ ಪ್ರೋತ್ಸಾಹ. * ಕೃಷಿ ಅಭಿವೃದ್ಧಿ. * ಕೈಗಾರಿಕಾ ಅಭಿವೃದ್ಧಿ. * ವೃತ್ತಿಪರತೆ ಶಿಕ್ಷಣಕ್ಕೆ ಆದ್ಯತೆ. * ಪಂಚವಾರ್ಷಿಕ ಯೋಜನೆಗಳು. * ಗ್ರಾಮೀಣ ಅಭಿವೃದ್ಧಿ ಯೋಜನೆಗಳು. * ಉದ್ಯೋಗ ಖಾತರಿ ಯೋಜನೆ. * ಜನಸಂಖ್ಯೆ ನಿಯಂತ್ರಿಸುವುದು. * ಶೈಕ್ಷಣಿಕ ಸುಧಾರಣೆಗಳು

**8) ಸಂಘಟಿತ ಮತ್ತು ಅಸಂಘಟಿತ ವಲಯದ ಕೆಲಸಗಾರರ ನಡುವಿನ ವ್ಯತ್ಯಾಸ ತಿಳಿಸಿರಿ. (ಜೂ2020)**

| | ಸಂಘಟಿತ ದುಡಿಮೆಗಾರರು | ಅಸಂಘಟಿತ ದುಡಿಮೆಗಾರರು |
|---|---|---|
| 1 | ಕಾನೂನು ನಿಯಂತ್ರಣಕ್ಕೆ ಒಳಪಡುತ್ತಾರೆ | ಕಾನೂನಿನ ನಿಯಂತ್ರಣಕ್ಕೆ ಒಳಪಡುವುದಿಲ್ಲ |
| 2 | ನಿಗಧಿತ ವೇತನ ವಿರುತ್ತದೆ | ನಿಗದಿತ ವೇತನ ಇರುವುದಿಲ್ಲ |
| 3 | ಉದ್ಯೋಗದ ಭದ್ರತೆ ಇರುತ್ತದೆ | ಉದ್ಯೋಗದ ಭದ್ರತೆ ಇರುವುದಿಲ್ಲ |
| 4 | ಕೆಲಸದ ನಿಶ್ಚಿತ ನಿಯಮಗಳು ಇರುತ್ತವೆ | ಯಾವುದೇ ಕೆಲಸದ ನಿಯಮಗಳಿರುವುದಿಲ್ಲ |
| 5 | ವಿಶೇಷ ಸೌಲಭ್ಯಗಳು ಮತ್ತು ಭತ್ಯೆಗಳು ಇರುತ್ತವೆ | ಯಾವುದೇ ವಿಶೇಷ ಸೌಲಭ್ಯ ಭತ್ಯೆಗಳಿರುವುದಿಲ್ಲ. |
| 6 | ಸರಕಾರಿ ನೌಕರರು, ಕೈಗಾರಿಕೆಗಳು, ಖಾಸಗಿ ಕಂಪನಿವ್ಯಾಪಾರಿಗಳು | ಮನೆಗೆಲಸ ಮನೆ ಕಟ್ಟಡ ವಾಹನ |

**09) ಕೂಲಿ ಸಹಿತ ದುಡಿಮೆ ಮತ್ತು ಕೂಲಿ ರಹಿತ ದುಡಿಮೆ ವ್ಯತ್ಯಾಸ ತಿಳಿಸಿ (ಏ.2024)**
ಉತ್ತರ:– **ಕೂಲಿ ಸಹಿತ ದುಡಿಮೆ** : ಭೌತಿಕ ರೂಪದ ಪ್ರತಿಫಲ ನೀಡುವ ದುಡಿಮೆ ಉದಾ: ಕೈಗಾರಿಕೆ, ಗಾರೆ ಕೆಲಸ, ವಾಹನ ರಿಪೇರಿ
**ಕೂಲಿ ರಹಿತ ದುಡಿಮೆ** : ಮನ: ಸಂತೋಷದ ದೃಷ್ಟಿಯಿಂದ ಕೈಗೊಳ್ಳುವ ದುಡಿಮೆ ಉದಾ: ಕಲಾಕಾರ, ಹಾಡುಗಾರ

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : **ಕೊಟ್ರೇಶ್ ಮಾಳಿಗಿ,** ಸಮಾಜ ವಿಜ್ಞಾನ ಶಿಕ್ಷಕರು, ಬ್ಯಾಸಿಗಿದೇರಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ)

**ಕ.ರಾ.ಮಕ್ಕಳ ಸಾಹಿತ್ಯ ಪರಿಷತ್, ವಿಜಯನಗರ ಜಿಲ್ಲೆ**

# ಧರ್ಮಮಾರ್ಗದಲ್ಲಿ ನಡೆದು ಹೆಣ್ಣನ್ನು ಗೌರವಿಸಿ

## ಉಜ್ಜಿನ ಶ್ರೀಗಳು ಹೇಳಿಕೆ । 45 ನೇ ದೇವಿ ಪುರಾಣ ಪ್ರವಚನ ಕಾರ್ಯಕ್ರಮ

■ **ಹಂಪಿ ಟೈಮ್ಸ್ ಕೊಟ್ಟೂರು**



ವಿಶ್ವದಲ್ಲಿ ಅತೀ ಹೆಚ್ಚು ಧಾರ್ಮಿಕ ಶ್ರದ್ಧಾ ಕೇಂದ್ರಗಳು ಇರುವುದು ಭಾರತದಲ್ಲಿ ಮಾತ್ರ ಇದು ಈ ಮಣ್ಣಿನ ಹಿರಿಮೆ ಎಂದು ಶ್ರೀ ಮದ್ ಉಜ್ಜಯಿನಿ ಸದ್ದರ್ಮ ಸಿಂಹಾಸನಾಧೀಶ್ವರ ಜಗದ್ಗುರು ಸಿದ್ದಲಿಂಗ ರಾಜದೇಶಿ ಕೇಂದ್ರ ಶಿವಾಚಾರ್ಯ ಸ್ವಾಮಿಜೀ ಹೇಳಿದರು.

ಶರನ್ನವರಾತ್ರಿ ಅಂಗವಾಗಿ ತಾಲೂಕಿನ ಉಜ್ಜಿನಿ ಗ್ರಾಮದಲ್ಲಿ ಶ್ರೀ ಕಾಳಿಕಾದೇವಿ ದೇವಸ್ಥಾನ, ಜೀರ್ಣೋದ್ಧಾರ ಹಾಗೂ ಶ್ರೀ ಅಮರ ಶಿಲ್ಪಿ ಜಕಣಾಚಾರ್ಯ ಕುಶಲಕರ್ಮಿಗಳ ವಿಕಾಸ ಟ್ರಸ್ಟ್ ವತಿಯಿಂದ 45 ನೇ ದೇವಿ ಪುರಾಣ ಪ್ರವಚನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಆರ್ಶಿವಚನ ನೀಡಿದರು.

ಭಾರತ ದೇಶವು ವಿವಿಧೆತೆಯಲ್ಲಿ ಏಕತೆ ಹೊಂದಿದೆ. ಇಲ್ಲಿ ಪ್ರತಿ ಹಬ್ಬಗಳಿಗೂ ಒಂದು ವಿಶಿಷ್ಠವಾದ ಆಚರಣೆ ಇದೆ ಈ ಮೂಲಕ ಅದರ ಪ್ರಾಮುಖ್ಯತೆಯನ್ನು ಜಗತ್ತಿಗೆ ಸಾರುತ್ತ ಬರುತ್ತಿದೆ. ಆ ನಿಟ್ಟಿನಲ್ಲಿ ನವರಾತ್ರಿ ಹಬ್ಬವು ಶಕ್ತಿ ದೇವತೆಯ ಸಂಕೇತ.

ಹೆಣ್ಣು ಶಕ್ತಿ ದೇವತೆಯಾಗಿದ್ದು, ತಾಯಿಯಾಗಿ, ಸಹೋದರಿಯಾಗಿ, ಮನೆ ಒಡತಿಯಾಗಿದ್ದು, ನಾವುಗಳು ಗೌರವದಿಂದ ಕಾಣುವುದು ನಮ್ಮ ಧರ್ಮ. ಅದನ್ನು ಮೀರಿ ನಾವುಗಳು ನಡೆದರೆ ಆಪತ್ತು ತಪ್ಪಿದ್ದಲ್ಲ.

ಜಾಗತಿಕರಣದ ಭರಾಟೆಯಲ್ಲಿ ಹೆಣ್ಣನ್ನು ಗೌರವಿಸದೇ ತುಚ್ಚ ಭಾವನೆಯಿಂದ ನಡೆಸಿಕೊಳ್ಳುತಿರುವುದು ಅಸಹನೀಯ. ನಾವುಗಳು ಧರ್ಮಮಾರ್ಗದಲ್ಲಿ ನಡೆದು ಹೆಣ್ಣನ್ನು ಗೌರವಿಸಬೇಕಿದೆ. ಮನೆಯಲ್ಲಿ ವೃದ್ದ ತಂದೆ, ತಾಯಿಗಳನ್ನು ಅತ್ಯಂತ ಪ್ರೀತಿಯಿಂದ ಕಾಣಬೇಕಿದೆ ಎಂದು ತಿಳಿಸಿದರು.

ನವರಾತ್ರಿ 9 ದಿನಗಳ ಪುರಾಣದತಾತ್ಪರ್ಯ ಮನುಷ್ಯರಲ್ಲಿನ ಮೋಹ, ಮದ, ಮತ್ಸರಗಳೆಂಬ ಅಷ್ಟ ಮದಗಳನ್ನು ತೊಡೆದು ಹಾಕಿ ಸಾತ್ವಿಕರಾಗಿ ಸಮಾಜದಲ್ಲಿ ಎಲ್ಲರೊಂದಿ ಗೆ ಭಾತೃತ್ವ ಭಾವನೆಗಳೊಂದಿಗೆ ಜೀವಿಸಬೇಕು ಎನ್ನುವುದೆ ಇದರ ಅರ್ಥ. ದಾನವತ್ವ ತೊಡೆದು ಹಾಕಿ ಮನುಷ್ಯತ್ವದಿಂದ ಬಾಳಿ.

ಎಚ್.ಎಂ.ಬಿ.ಗುರುಮೂರ್ತಿ ಸ್ವಾಮಿ ಶಿಕ್ಷಕರು ಪುರಾಣ ಪ್ರವಚನ ನಡೆಸಿದರು, ಪುರೋಹಿತ್ ಸಿದ್ದೇಶ್ ಶರ್ಮ ಪಠಣ ಮಾಡಿದರು.

ಮುಖಂಡರಾದ ರೇವಣ್ಣ, ಶಿವಣ್ಣ, ಕಸಾಪ ಅಧ್ಯಕ್ಷ ವೀರೇಶ್ ಅಂಗಡಿ, ಕಜಾಪ ಅಧ್ಯಕ್ಷ ಕೆ.ಎಂ.ವೀರೇಶ್, ಸಾಹಿತಿ ಭೀಮಣ್ಣ ಗಜಾಪುರ, ಬಡಿಗೇರ ನಾಗರಾಜ, ಡಾ. ವೆಂಕಟೇಶ್ ಆಚಾರ್ಯ, ಕುರುಗೋಡು ಸಿದ್ದೇಶ್, ಶ್ರೀ ಕಾಳಿಕಾದೇವಿ ದೇವಸ್ಥಾನ ,ಜೀರ್ಣೋದ್ಧಾರ ಹಾಗೂ ಶ್ರೀ ಅಮರ ಶಿಲ್ಪಿ ಜಕಣಾಚಾರ್ಯ ಕುಶಲಕರ್ಮಿಗಳ ವಿಕಾಸ ಟ್ರಸ್ಟ್ ನ ಅಧ್ಯಕ್ಷ ಮರುಳಸಿದ್ದ ಆಚಾರ್ಯ, ಗೌರವಾಧ್ಯಕ್ಷ ಬಿ.ರವೀಂದ್ರ ಆಚಾರ್ಯ, ಉಪಾಧ್ಯಕ್ಷ ಸಿದ್ದೇಶ್ ಆಚಾರ್ಯ, ಕಾರ್ಯದರ್ಶಿ ಬಿ.ಶಿವಾಚಾರ್ಯ ಸೇರಿದಂತೆ ಪದಾಧಿಕಾರಿಗಳು, ಗ್ರಾಮಸ್ಥರು ಇದ್ದರು.

# ಅ. 09 ರಿಂದ ಲೋಕಾಯುಕ್ತ ಜನ ಸಂಪರ್ಕ ಸಭೆ

**ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕ ಲೋಕಾಯುಕ್ತ ಹೊಸಪೇಟೆ ಘಟಕದಿಂದ ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರು ಹಾಗೂ ಪೊಲೀಸ್ ನಿರೀಕ್ಷಕರ ನೇತೃತ್ವದಲ್ಲಿ ಅಕ್ಟೋಬರ್ 09 ರಿಂದ ಜಿಲ್ಲೆಯ ವಿವಿಧೆಡೆ ಲೋಕಾಯುಕ್ತ ಜನ ಸಂಪರ್ಕ ಸಭೆಗಳು ನಡೆಯಲಿವೆ.

ಲೋಕಾಯುಕ್ತ ಅಧಿಕಾರಿಗಳು ಅಕ್ಟೋಬರ್ 09ರಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಕೂಡ್ಲಿಗಿ ತಾಲೂಕು ಕಚೇರಿ ಸಭಾಂಗಣದಲ್ಲಿ, ಅಕ್ಟೋಬರ್ 15ರಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಕೊಟ್ಟೂರು ತಾಲೂಕು ಕಚೇರಿ ಸಂಭಾಂಗಣದಲ್ಲಿ ಮತ್ತು ಅಕ್ಟೋಬರ್ 22ರಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಹರಪನಹಳ್ಳಿ ತಾಲೂಕು ಕಚೇರಿ ಸಂಭಾಂಗಣದಲ್ಲಿ ಜನ ಸಂಪರ್ಕ ಸಭೆಗಳು ನಡೆಯಲಿದ್ದು, ಸಾರ್ವಜನಿಕರು ತಮ್ಮ ಕುಂದುಕೊರತೆಗಳು, ಅಹವಾಲುಗಳು ಹಾಗೂ ತಮ್ಮ ಸರಕಾರಿ ಕೆಲಸಗಳಿಗೆ ಸಂಬಂಧಿಸಿದಂತೆ ಸರ್ಕಾರಿ ಕಚೇರಿಗಳಲ್ಲಿ ಅನಗತ್ಯ ವಿಳಂಬತೆ, ಕಿರುಕುಳ, ತೊಂದರೆ ಮತ್ತು ಅಧಿಕಾರಿ ಸಿಬ್ಬಂದಿಯ ದುರಾಡಳಿತಕ್ಕೆ ಸಂಬಂಧಿಸಿದ ದೂರುಗಳನ್ನು ಸಂಬಂಧಿಸಿದ ತಾಲೂಕುಗಳಲ್ಲಿ ಆಯಾ ದಿನಾಂಕದಂದು ದ್ವಿಪ್ರತಿಯಲ್ಲಿ ದೂರ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಕರ್ನಾಟಕ ಲೋಕಾಯುಕ್ತ ಹೊಸಪೇಟೆ ಘಟಕದ ಪೊಲೀಸ್ ಉಪಾಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಚಿವ ಜಮೀರ್ ಅಹ್ಮದ್ ಖಾನ್ ಪ್ರವಾಸ ಕಾರ್ಯಕ್ರಮ

**ಹಂಪಿ ಟೈಮ್ಸ್ ಬಳ್ಳಾರಿ**



ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಅವರು ಅ.09 ರಂದು ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳುವರು.

ಅ.09 ರಂದು ಬೆಳಿಗ್ಗೆ ಹೊಸಪೇಟೆಯಿಂದ ಹೊರಟು, ಬೆಳಿಗ್ಗೆ 10.15 ಕ್ಕೆ ಕಂಪ್ಲಿ ಗೆ ಆಗಮಿಸುವರು. ನಂತರ ಕಂಪ್ಲಿ ಶಾಸಕರು ಆಯೋಜಿಸಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸುವರು.

ಬಳಿಕ ಮಧ್ಯಾಹ್ನ 02.30 ಗಂಟೆಯಿಂದ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಜಿಲ್ಲೆಯ ಕೆಡಿಪಿ ಪ್ರಗತಿ ಪರಿಶೀಲನಾ ಸಭೆ ನಡೆಸುವರು. ಸಚಿವರು ಸಂಜೆ 06.30 ಗಂಟೆಗೆ ಬಳ್ಳಾರಿಯಿಂದ ಹೊಸಪೇಟೆಗೆ ತೆರಳುವರು ಎಂದು ಸಚಿವರ ಆಪ್ತ ಕಾರ್ಯದರ್ಶಿ ತಿಳಿಸಿದ್ದಾರೆ.


## ಸ್ಥಳೀಯ ಸಮಗ್ರ ಸುದ್ದಿಗಳಿಗಾಗಿ

ಹಂಪಿ ಟೈಮ್ಸ್ ದಿನಪತ್ರಿಕೆಯ ಚಂದದಾರರಾಗಿರಿ
ಹೊಸಪೇಟೆ, ಹಗರಿಬೊಮ್ಮನಹಳ್ಳಿ, ಹಡಗಲಿ, ಹರಪನಹಳ್ಳಿ, ಕೊಟ್ಟೂರು ಹಾಗೂ ಕೂಡ್ಲಿಗಿ ತಾಲೂಕಿನಲ್ಲಿ ನಿಮ್ಮ ಸಮೀಪದ ಪತ್ರಿಕಾ ಏಜೆಂಟರನ್ನು ಕೇಳಿ ಪಡೆಯಿರಿ


## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಹಂಪಿಯಲ್ಲಿ ಶಕ್ತಿ ದೇವತೆಗಳ ಆರಾಧನೆ

## ನಾಡ ದೇವತೆ ಹಂಪಿಯ ಭುವನೇಶ್ವರಿ

ನವರಾತ್ರಿ ಈ ಸಂದರ್ಭದಲ್ಲಿ ನವ ದುರ್ಗೆಯರ ಆರಾಧನಾ ಪರ್ವಕಾಲ. ಜಗಜ್ಜನನಿ ದುರ್ಗಾದೇವಿ ಪ್ರತಿಬಿಂಬಿಸುವ ಆಧ್ಯಾತ್ಮಿಕ ಹಾಗೂ ಅಲೌಕಿಕ ಅನುಭೂತಿಯನ್ನು ಸ್ಮರಿಸುವ ಪುಣ್ಯಕಾಲ. ಪ್ರತಿದಿನವೂ ಒಂದೊಂದು ಅವತಾರದ ಪೂಜೆ, ಕಟ್ಟಳೆ, ಶ್ರದ್ಧೇ, ನಂಬಿಕೆ ನಡೆಯುತ್ತವೆ. ಈ 9 ದಿನವೂ ಅತ್ಯಂತ ಪವಿತ್ರ ದಿನಗಳು. ಈ 9 ದಿನಗಳಲ್ಲಿ ಈಗಾಗಲೇ ಮೂರು ಅವತಾರಗಳ ಪೂಜೆಯನ್ನು ಮುಗಿಸಿದ್ದೇವೆ. ಈ ದಿನ ಅಕ್ಟೋಬರ್ 6, ಚತುರ್ಥ ದಿನ ಅಂದರೆ ಕೂಷ್ಮಾಂಡ ಪೂಜೆ. ಸೂರ್ಯನನ್ನು ಪ್ರತಿನಿಧಿಸುತ್ತಾಳೆ. ಹೀಗಾಗಿ ಬೆಳಕು ಮತ್ತು ಜ್ಞಾನ ಈ ಪೂಜೆಯಿಂದ ಲಭಿಸುತ್ತದೆ ಎಂಬ ನಂಬಿಕೆ ಹಾಗೂ ಭುವನೇಶ್ವರಿ ಆರಾಧನೆಯನ್ನು ಸಹ ಈ ದಿನ ಮಾಡಲಾಗುತ್ತಿದೆ, ಹಂಪಿಯ ಶಕ್ತಿ ದೇವತೆಗಳಲ್ಲಿ ಈಗಾಗಲೇ ಮೂರು ದೇವತೆಗಳ ಕುರಿತು ಮಾಹಿತಿ ಪಡೆದಿದ್ದೀರಿ ನವರಾತ್ರಿಯ ನಾಲ್ಕನೇ ದಿನದ ಸಂಧರ್ಭದಲ್ಲಿ ಹಂಪಿಯ ಶಕ್ತಿ ದೇವತೆಯು ಹಾಗೂ ನಾಡ ದೇವತೆಯು ಆಗಿರುವ ಭುವನೇಶ್ವರಿಯ ಕುರಿತ ಮಾಹಿತಿ.



ಎಂ.ಎಂ.ಶಿವಪ್ರಕಾಶ
ಲೇಖಕರು: ಹೊಸಪೇಟೆ
ಮೊ: 9449654489
Scan For Digital Colourful
HAMPI TIMES E-paper

ಪಂಪಾಂಬಿಕೆ, ಪಟ್ಟಣದ ಯಲ್ಲಮ್ಮ, ಹತ್ತು ಕೈ ಯಮ್ಮಶಕ್ತಿ ದೇವತೆಗಳ ಬಗ್ಗೆ ಈಗಾಗಲೇ ಓದಿರುವಿರಿ ಅದೇ ರೀತಿ ಚಾರಿತ್ರಿಕ ಮಹತ್ವವನ್ನು ಹೊಂದಿರುವ ಮತ್ತೊರ್ವ ಶಕ್ತಿ ದೇವತೆ ಎಂದರೆ, ಭುವನೇಶ್ವರಿ. ಈಕೆ ಕರ್ನಾಟಕದ ರಾಜರಾಜೇಶ್ವರಿ ಹಾಗೂ ನಾಡ ದೇವತೆಯು ಆಗಿರುವುದು ಮತ್ತೊಂದು ವಿಶೇಷವಾದದ್ದಾಗಿದೆ. ಕನ್ನಡಿಗರ ಕುಲದೇವತೆಯಾಗಿರುವ ಭುವನೇಶ್ವರಿಗೆ ಪೌರಾಣಿಕ, ಧಾರ್ಮಿಕ, ಐತಿಹಾಸಿಕ ಮತ್ತು ಸಾಂಸ್ಕೃತಿಕವಾದ ಚರಿತ್ರೆ ಇದೆ. ಪೌರಾಣಿಕವಾಗಿ ನೋಡುವುದಾದರೆ ದುರ್ಗೆಯ 9 ರೂಪಗಳಲ್ಲಿ ನಾಲ್ಕನೇಯ ರೂಪವೇ ಭುವನೇಶ್ವರಿ ಎನ್ನುತ್ತಾರೆ. ಈ ಭುವನೇಶ್ವರಿ ಕನ್ನಡಿಗರ ನಾಡ ದೇವತೆ, ಕನ್ನಡದ ಮೊದಲ ರಾಜ ಮನೆತನವಾದ ಕದಂಬರರಿಗೆ ಭುವನೇಶ್ವರಿಯೇ ಅಧಿದೇವತೆಯಾಗಿದ್ದವಳು. ನಂತರ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ಭುವನೇಶ್ವರಿಯ ಆಶೀರ್ವಾದವೇ ಕಾರಣ ಎನ್ನುತ್ತಾರೆ, ಹೌದು ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ವಿದ್ಯಾರಣ್ಯರು ಭುವನೇಶ್ವರಿಯನ್ನು ಕುರಿತು ಪ್ರಾರ್ಥಿಸಿದಾಗ ಆಕೆ ಪ್ರತ್ಯಕ್ಷಳಾಗಿ ಆಶೀರ್ವಾದ ಮಾಡಿ ಚಿನ್ನದ ಮಳೆಯನ್ನೇ ಹಂಪಿಯಲ್ಲಿ



ಸುರಿಸಿದಳು ಎಂಬ ಐತಿಹ್ಯ, ನಂಬಿಕೆ ಇದೆ. ಈ ಕಾರಣದಿಂದಾಗಿಯೇ ವಿದ್ಯಾರಣ್ಯರು ಹಂಪಿಯಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದರು ಎಂಬುದು ಐತಿಹಾಸಿಕವಾದದ್ದಾಗಿದೆ.

ಭುವನೇಶ್ವರಿಯ ದೇವಾಲಯಗಳು ಹಂಪಿ ಮತ್ತು ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದ ಭುವನ ಹಳ್ಳಿಯಲ್ಲಿವೆ. ಆದರೆ ಹಂಪಿಯ ಭುವನೇಶ್ವರಿಗೆ ನಾಡ ದೇವತೆಯ ಪಟ್ಟವಿದೆ. ಏಕೆಂದರೆ ಭುವನೇಶ್ವರಿಯು ಪ್ರತ್ಯಕ್ಷಳಾಗಿ ಈ ನೆಲದಲ್ಲಿ ಕರ್ನಾಟಕದ ಸಾಮ್ರಾಜ್ಯವನ್ನು ಸ್ಥಾಪಿಸಲು ಆಶೀರ್ವಾದ ಮಾಡಿದ್ದಳು ಎಂಬ ನಂಬಿಕೆ ನೂರಾರು ವರ್ಷಗಳಿಂದ ಹಾಗೆಯೇ ಉಳಿದುಕೊಂಡು ಬಂದಿದೆ. ಅಲ್ಲದೆ ಮುಂದೆ ಕರ್ನಾಟಕದ ಏಕೀಕರಣದ ಸಂದರ್ಭದಲ್ಲಿ ಕರ್ನಾಟಕದ ಏಕೀಕರಣದ ಹೋರಾಟ, ಸಂಕಲ್ಪ ಪ್ರಾರಂಭಗೊಂಡಿದ್ದೇ ಹಂಪಿಯ ನೆಲದಲ್ಲಿ ಹಾಗೂ ಕರ್ನಾಟಕ ಏಕೀಕರಣವಾದ ಮೇಲೆ ಏಕೀಕರಣ ಹೋರಾಟದ ರೂವಾರಿ ಆಲೂರು ವೆಂಕಟರಾಯರು ಮೊದಲ ಪೂಜೆಯನ್ನು ಸಲ್ಲಿಸಿದ್ದು ಹಂಪಿಯ ಭುವನೇಶ್ವರಿಗೆ, ಹೀಗಾಗಿ ಕರ್ನಾಟಕದ ಏಕೀಕರಣದ ಸಂದರ್ಭದಲ್ಲಿ ಹಾಗೂ ಆ ನಂತರ ಹಂಪಿಯ ಭುವನೇಶ್ವರಿಗೆ ಮಹತ್ವದ ಸ್ಥಾನವಿದೆ.

ನಾಡ ದೇವತೆ ಭುವನೇಶ್ವರಿ ದೇವಿಯ ದೇವಸ್ಥಾನವು ವಿಜಯನಗರ ಸಾಮ್ರಾಜ್ಯಕ್ಕಿಂತ ಪೂರ್ವದಲ್ಲಿ ಸ್ಥಾಪಿಸಲ್ಪಟ್ಟಿದೆ. ಹೊಯ್ಸಳರ ಕಾಲದಲ್ಲಿ ಈ ದೇವಾಲಯ ಕಟ್ಟಲ್ಪಟ್ಟಿದೆ. ಇದು ಹೊಯ್ಸಳರ ಶೈಲಿ, ವಾಸ್ತುಶಿಲ್ಪವನ್ನು ಹೊಂದಿದ್ದು, ವಿಜಯನಗರ ಸಾಮ್ರಾಜ್ಯದ ಪೂರ್ವದಲ್ಲೇ ಸ್ಥಾಪಿಸಲ್ಪಟ್ಟಿರುವುದು ಮತ್ತೊಂದು ಚಾರಿತ್ರಿಕವಾದಂತ ಮಹತ್ವವನ್ನು ಪಡೆದುಕೊಂಡಿದೆ. ಈ ನಾಡ ದೇವತೆ ಭುವನೇಶ್ವರಿಗೆ ಪೂಜೆಯು ನಿತ್ಯವೂ ನಡೆದುಕೊಂಡು ಬಂದಿದೆ. ದಿನವು ಸಾವಿರಾರು ಜನ ಪ್ರವಾಸಿಗರು ಭುವನೇಶ್ವರಿಯ ದರ್ಶನವನ್ನು ಪಡೆಯುತ್ತಿದ್ದಾರೆ. ವಿಶೇಷ ಸಂದರ್ಭಗಳಲ್ಲಿ ವಿಶೇಷವಾದ ಪೂಜೆ ಅಲಂಕಾರಗಳು ಈ ದೇವತೆಗೆ ನಡೆಯುತ್ತಿವೆ. ಈ ನೆಲದಲ್ಲಿ ಕನ್ನಡಕ್ಕೆ ಸಂಬಂಧಿಸಿದ ಅನೇಕ ಹೋರಾಟಗಳು ನಡೆಯುತ್ತಾ ಬಂದಿವೆ.. ಏಕೀಕರಣದ ರೂವಾರಿಗಳೆಂದೇ ಪ್ರಸಿದ್ಧಿ ಪಡೆದಿರುವ ಆಲೂರು ವೆಂಕಟರಾಯರಿಂದ ಹಿಡಿದು ನಮ್ಮ ಕಾಲದ ಡಾ. ಎಂ ಚಿದಾನಂದಮೂರ್ತಿ ಅವರವರಿಗೆ ಈ ಭುವನೇಶ್ವರಿಯನ್ನು ಆರಾಧಿಸುತ್ತಾ ಕನ್ನಡದ ನಾಡು ನುಡಿಗಾಗಿ ಅವಳ ಆಶೀರ್ವಾದವನ್ನು ಪಡೆಯುತ್ತಾ ಬಂದಿದ್ದಾರೆ. ಡಾ. ಎಂ ಚಿದಾನಂದಮೂರ್ತಿ ಅವರು ಕನ್ನಡ ಕರ್ನಾಟಕದ ಸಂಕಲ್ಪಕ್ಕಾಗಿ ಆಗಿ ಬೆಂಗಳೂರಿನಿಂದ ಹಂಪಿ ವರಿಗೆ ಪಾದಯಾತ್ರೆ ಕೈಗೊಂಡು ಭುವನೇಶ್ವರಿಗೆ ಪೂಜೆಯನ್ನು ಸಲ್ಲಿಸಿದ್ದು ಹಾಗೂ ಅವರ ಕನ್ನಡ ನಾಡು ನುಡಿಯ ಹೋರಾಟಕ್ಕಾಗಿ ಸ್ಥಾಪಿತವಾದ ಅವರು ಕನ್ನಡ ಶಕ್ತಿ ಕೇಂದ್ರ ಸ್ಥಾಪಿತವಾಗಿದ್ದು ಸಹ ಭುವನೇಶ್ವರಿಯ ಹಂಪಿಯ ನೆಲದಲ್ಲಿಯೇ. ಹೀಗಾಗಿ ಕನ್ನಡ ನಾಡು, ನುಡಿಯ ವಿಚಾರ ಬಂದಾಗ ಹಂಪಿಯ ಭುವನೇಶ್ವರಿಗೆ ವಿಶೇಷವಾದ ಪೂಜೆ ಗೌರವಗಳು ಸಲ್ಲುತ್ತವೆ. ಕರ್ನಾಟಕದ ನಾಡ ದೇವತೆಯಾಗಿ ಭುವನೇಶ್ವರಿಯ ಕರ್ನಾಟಕದ ಕೋಟ್ಯಾಂತರ ಜನರ ಮನಸ್ಸಿನಲ್ಲಿ ನೆಲೆಸಿದ್ದಾಳೆ.

ವಿರೂಪಾಕ್ಷ ದೇವಸ್ಥಾನದ ಪ್ರಾಂಗಣದಲ್ಲಿ ಪಂಪಾಂಬಿಕೆಯ ದೇವಸ್ಥಾನದ ಪಕ್ಕದಲ್ಲೇ ಭುವನೇಶ್ವರಿಯ ದೇವಸ್ಥಾನವಿದೆ. ವಿರೂಪಾಕ್ಷ ಪಂಪಾಂಬಿಕೆಯರ ದರ್ಶನದೊಂದಿಗೆ ಭುವನೇಶ್ವರಿಯ ದರ್ಶನವನ್ನು ಪಡೆಯುತ್ತಿದ್ದಾರೆ. ಮೈಸೂರಿನಲ್ಲಿ ಅಧಿದೇವತೆ ಚಾಮುಂಡೇಶ್ವರಿಯ ಮೂರ್ತಿಯನ್ನು ಇಟ್ಟು ದಸರಾ ಮೆರವಣಿಗೆ ನಡೆಯುತ್ತದೆ. ಅದೇ ರೀತಿ ಹಂಪಿಯಲ್ಲಿಯೂ ಹಂಪಿ ಉತ್ಸವದ ಸಂದರ್ಭದಲ್ಲಿ ಭುವನೇಶ್ವರಿಯ ಮೂರ್ತಿಯನ್ನು ಇಟ್ಟು ಮೆರವಣಿಗೆಯನ್ನು ಮಾಡಲಾಗುತ್ತಿದೆ ನಾಡಿನ ಯಾವುದೇ ಕನ್ನಡದ ಕಾರ್ಯಕ್ರಮಗಳಿರಲಿ ಅಲ್ಲಿ ಭುವನೇಶ್ವರಿಯ ಪೂಜೆ ನಾಡ ಧ್ವಜಗಳು ಹಾರಾಡುತ್ತವೆ.. ಕರ್ನಾಟಕದ ರಾಜ್ಯೋತ್ಸವದ ಸಂದರ್ಭದಲ್ಲಿ ಹಂಪಿಯಿಂದ ನಾಡಿನ ರಾಜಧಾನಿ ಬೆಂಗಳೂರಿನವರಿಗೆ ಭುವನೇಶ್ವರಿಯ ಪೂಜೆ ಮೆರವಣಿಗೆ ನಡೆಯುತ್ತವೆ. ಸೌಮ್ಯ ಸ್ವಭಾವದ ಭುವನೇಶ್ವರಿಯು ಕನ್ನಡಿಗರೆಲ್ಲರ ಆರಾಧ್ಯ ದೈವವಾಗಿ ಪೂಜೆಗೊಳುತ್ತಿದ್ದಾಳೆ. ಆ ಪೂಜೆ ಗೊಳ್ಳುವ ದೇವತೆಯೇ ಹಂಪಿಯ ಭುವನೇಶ್ವರಿ. ಇವಳೇ ನಾಡ ದೇವತೆ.

# ಇಂದು ಸಿರಿಗನ್ನಡ ವೇದಿಕೆ ಜಿಲ್ಲಾ ಘಟಕ ಉದ್ಘಾಟನೆ, ಕೃತಿಗಳ ಲೋಕಾರ್ಪಣೆ

**ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನದ ಮಠದಲ್ಲಿ ಅ.6ರಂದು ಬೆಳಿಗ್ಗೆ 10.30ಕ್ಕೆ ಸಿರಿಗನ್ನಡ ವೇದಿಕೆ ಜಿಲ್ಲಾ ಘಟಕ ಉದ್ಘಾಟನೆ, ಪದಗ್ರಹಣ ಮತ್ತು ಕೃತಿ ಲೋಕಾರ್ಪಣೆ ಸಮಾರಂಭ ಜರುಗಲಿದೆ ಎಂದು ಘಟಕದ ಅಧ್ಯಕ್ಷ ಕೆ.ಎಂ.ಬಸವರಾಜ ತಿಳಿಸಿದ್ದಾರೆ.

ಜಿಲ್ಲಾ ಘಟಕ ಉದ್ಘಾಟನೆಯಂದೆ ನಿವೃತ್ತ ಇಂಜಿನಿಯರ್, ಕೃತಿಕಾರ ಕೆ.ಎಂ.ಬಸವರಾಜ ಅವರ ತಾಯಿ ತುಂಗಭದ್ರೆ ಮತ್ತು ಅಂತರಂಗದ ಮೃದಂಗ ಎರಡು ಕವನ ಸಂಕಲನಗಳು ಮತ್ತು ಎಸ್.ಎಸ್.ಮುದ್ಲಾಪುರ ಅವರ ಕವನ ಪುಷ್ಪಾಂಜಲಿ ಕೃತಿ ಲೋಕಾರ್ಪಣೆಗೊಳ್ಳಲಿವೆ. ಕೊಪ್ಪಳ ಗವಿಮಠದ ಶ್ರೀ ಜಗದ್ಗುರು ಅಭಿನವ ಶ್ರೀಗವಿಸಿದ್ದೇಶ್ವರ ಮಹಾಸ್ವಾಮಿಗಳು ಮತ್ತು ಕೊಟ್ಟೂರು ಸಂಸ್ಥಾನ ಮಠದ ಶ್ರೀ ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು ಸಾನ್ನಿಧ್ಯವಹಿಸಲಿದ್ದಾರೆ. ವೇದಿಕೆಯ ರಾಜ್ಯ ಗೌರವಧ್ಯಕ್ಷ ಡಾ.ಎಂ.ಆರ್.ನಾಗರಾಜರಾವ್ ಉದ್ಘಾಟಿಸಲಿದ್ದಾರೆ. ವಿಶ್ರಾಂತ ಉಪನ್ಯಾಸಕ ಡಾ.ಎಚ್.ಎಂ.ಚಂದ್ರಶೇಖರ ಶಾಸ್ತ್ರಿ, ಕ.ಚು.ಸಾ.ಪ. ಜಿಲ್ಲಾಧ್ಯಕ್ಷ ಎಲ್. ಹಾಲ್ಯಾನಾಯ್ಕ ಕೃತಿ ಪರಿಚಯ ಮಾಡಲಿದ್ದಾರೆ. ವಿವಿಧ ಘಟಕಗಳ ಪದಾಧಿಕಾರಿಗಳು, ಸಮಾಜ ಸೇವಕರು, ಕವಿಗಳು, ಲೇಖಕರು ಉಪಸ್ಥಿತರಿರಲಿದ್ದಾರೆ.

2023–24ನೇ ಶೈಕ್ಷಣಿಕ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಕನ್ನಡ ವಿಷಯದಲ್ಲಿ ಅತಿಹೆಚ್ಚು ಅಂಕ ಪಡೆದ ಪ್ರತಿಭಾಂತ ವಿದ್ಯಾರ್ಥಿಗಳಿಗೆ ಗೌರವ ಸನ್ಮಾನ, ಸಾಂಸ್ಕೃತಿಕ ನೃತ್ಯ, ಗಾಯನ, ಕವಿಗೋಷ್ಠಿ ಜರುಗಲಿವೆ ಎಂದು ತಿಳಿಸಿದ್ದಾರೆ.

# ಅ. 07ಕ್ಕೆ ಶಿಶುಕ್ಷು ಮೇಳ

**ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳದ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಅಕ್ಟೋಬರ್ 07 ರಂದು ಬೆಳಿಗ್ಗೆ 9 ಗಂಟೆಗೆ "ಶಿಶುಕ್ಷು ಮೇಳ ಕಾರ್ಯಕ್ರಮ"ವನ್ನು ಹಮ್ಮಿಕೊಳ್ಳಲಾಗಿದೆ.

ಹೊಸಪೇಟೆ ಸ್ಟೀಲ್ಸ್ ಲಿಮಿಟೆಡ್ ಗಿಣಿಗೇರಾ ಮತ್ತು ಅಲ್ಟ್ರಾಟೇಕ ಸಿಮೆಂಟ್ಸ್ ಗಿಣಿಗೇರಾ ಇವರಿಂದ ನಡೆಯುವ ಕಾರ್ಯಕ್ರಮದಲ್ಲಿ ಎಲೆಕ್ಟ್ರೀಷಿಯನ್, ಪಿಟ್ಟರ್, ಟರ್ನರ್, ವೆಲ್ಡರ್ ಮತ್ತು ಅಡ್ವಾನ್ಸ್ಡ ಸಿ.ಎನ್.ಸಿ ಮಷಿನಿಂಗ್ ಟೆಕ್ನಿಷಿಯನ್ ವೃತ್ತಿಯ ತರಬೇತಾರ್ಥಿಗಳು ಭಾಗವಹಿಸಿ ಸದುಪಯೋಗಪಡಿಸಿಕೊಳ್ಳಬೇಕು. ಭಾಗವಹಿಸುವವರು ಮೂಲ ದಾಖಲಾತಿಗಳಾದ ರೆಸ್ಯೂಮ್, ಪೋಟೋ, ಮಾರ್ಕ್ಸ್ ಕಾರ್ಡ್, ಎನ್.ಟಿ.ಸಿ ಮತ್ತು 2 ಝರಾಕ್ಸ್ ಪ್ರತಿಗಳೊಂದಿಗೆ ಹಾಜರಾಗಬೇಕು. ಹೆಚ್ಚಿನ ಮಾಹಿತಿಗಾಗಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರು, (ಟಣಕನಕಲ್, ಕುಷ್ಟಗಿ ರಸ್ತೆ, ಕೊಪ್ಪಳ) ಮೊಬೈಲ್ ಸಂಖ್ಯೆ: 9448813422, 9742532353, 9945577155, 9945672606, 9008536895 ಗೆ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಹಕಾರಿ ಸಂಘಗಳು ಸಾರ್ವಜನಿಕರ ವಿಶ್ವಾಸಗಳಿಸಲಿ

## ಸಚಿವ ಕೆ.ಎನ್.ರಾಜಣ್ಣ ಹೇಳಿಕೆ | ತುಂಗಭದ್ರಾ ರೈತರ ಕ್ಷೇಮಾಭಿವೃದ್ಧಿ ಸಂಘದ ಉದ್ಘಾಟನ ಕಾರ್ಯಕ್ರಮ

**ಹಂಪಿ ಟೈಮ್ಸ್ ಹೊಸಪೇಟೆ**

ಬಳ್ಳಾರಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ. ಹೊಸಪೇಟೆ ಇವರಿಂದ ನೂತನವಾಗಿ ಆರಂಭ ಗೊಂಡ ತುಂಗಭದ್ರಾ ರೈತರ ಕ್ಷೇಮಾಭಿವೃದ್ಧಿ ಸಂಘದ ಚಟುವಟಿಕೆಗಳಿಗೆ ಸಹಕಾರ ಸಚಿವರಾದ ಕೆ.ಎನ್.ರಾಜಣ್ಣ ಶನಿವಾರ ಚಾಲನೆ ನೀಡಿದರು.



ನಗರದ ಬಳ್ಳಾರಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ. ಸಭಾಂಗಣದಲ್ಲಿ ನಡೆದ ಕಾರ್ಯ ಕ್ರಮವನ್ನು ಮಡಿಕೆಗೆ ಭತ್ತ ಹಾಕುವುದರ ಮೂಲಕ ಉದ್ಘಾಟಿಸಿ ಮಾತನಾಡಿದ ಸಚಿವರು, ದೇಶದ ಬೆನ್ನೆಲುಬಾದ ರೈತಾಪಿ ಕುಟುಂಬದ ಜನರಿಗೆ ಕ್ಷೇಮಾಭಿವೃದ್ಧಿ ಸಂಘ ಇರಬೇಕೆಂಬ ಉದ್ದೇಶ ದಿಂದ ಬಳ್ಳಾರಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನವರು ಈ ಸಂಘವನ್ನು ಪ್ರಾರಂಭಿಸುತ್ತಿರುವುದು ಸಂತಸದ ಸಂಗತಿಯಾಗಿದೆ ಎಂದರು.

ಸಹಕಾರಿ ಸಂಘಗಳು ರೈತರ, ಜನರ ವಿಶ್ವಾಸಗಳಿಸುವಂತಾಗಬೇಕು. ಬಳ್ಳಾರಿ ಮತ್ತು ವಿಜಯನಗರ ಎರಡೂ ಅವಳಿ ಜಿಲ್ಲೆಗಳ ರೈತರ ಅಭ್ಯುದಯಕ್ಕೆ ರೈತರ ಕ್ಷೇಮಾಭಿವೃದ್ಧಿ ಸಂಘವು ಪೂರಕವಾಗಿ ಕಾರ್ಯನಿರ್ವಹಿಸಲಿ ಎಂದು ಸಚಿವರು ತಿಳಿಸಿದರು.

ಸಹಕಾರಿ ಆಂದೋಲನದಡಿ ಗ್ರಾಮ ಪಂಚಾಯಿತಿಗೊಂದು ಸಹಕಾರಿ ಸಂಘ ಮಾಡಬೇಕು ಎಂದು ಸಹಕಾರಿ ಸಂಘಗಳ ನಿರ್ದೇಶಕರು ಕೇಳುತ್ತಿದ್ದಾರೆ. ಈ ಪ್ರಯತ್ನ ನಡೆಯುತ್ತಿದ್ದು, ಈ ಬಗ್ಗೆ ರಾಜ್ಯಮಟ್ಟದ ಅಧಿಕಾರಿ ಗಳ ಸಭೆ ನಡೆಸಿ ಸೂಚನೆ ನೀಡಲಾಗುವುದು ಎಂದರು.

ಸಹಕಾರಿ ಸಂಸ್ಥೆಗಳು ರೈತರ ಹಿತ ಕಾಯಬೇಕು. ಸಹಕಾರಿ ಸಂಘಗಳಲ್ಲಿ ಕೇವಲ ಬೆಳೆ ಸಾಲ ಪಡೆಯದೇ ತಮ್ಮೆಲ್ಲ ವಹಿವಾಟುಗಳನ್ನು ಸಂಘದ ಬ್ಯಾಂಕುಗಳಲ್ಲಿಯೇ ಮಾಡುವಂತಹ ಪ್ರಯತ್ನವನ್ನು ಎಲ್ಲಾ ಸಹಕಾರಿಗಳು ಮಾಡಬೇಕು ಎಂದರು. ಬೆಳೆಸಾಲದ ಹೊರತಾಗಿಯೂ ಕಡಿಮೆ ಬಡ್ಡಿದರದಲ್ಲಿ ಸಾಲ ಸೌಲಭ್ಯಗಳಿದ್ದು ಅವುಗಳನ್ನು ಸಹ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಬಿ.ಡಿ.ಸಿ.ಸಿ ಬ್ಯಾಂಕ್ ಅಧ್ಯಕ್ಷರಾದ ಕೆ. ತಿಪ್ಪೇಸ್ವಾಮಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಜಿಲ್ಲೆಯಲ್ಲಿ ವಿವಿಧ ಕ್ಷೇತ್ರಗಳ ಕ್ಷೇಮಾಭಿವೃದ್ಧಿ ಸಂಘಗಳಿದ್ದು, ರೈತರ ಕ್ಷೇಮಾಭಿವೃದ್ಧಿ ಸಂಘವಿರಲಿಲ್ಲ. ಇದು ಬಹುದಿನಗಳ ಬೇಡಿಕೆಯೂ ಆಗಿತ್ತು. ಅದರಂತೆ ಹೊಸಪೇಟೆ ತುಂಗಭದ್ರಾ ರೈತರ ಕ್ಷೇಮಾಭಿವೃದ್ಧಿ ಸಂಘವನ್ನು ಪ್ರಾರಂಭಿಸಲಾಗಿದೆ ಎಂದರು. ಮಕ್ಕಳ ಹಾಗೂ ವಿಶೇಷವಾಗಿ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹಾಸ್ಟೆಲ್ ವ್ಯವಸ್ಥೆ ಕಲ್ಪಿಸುವ ಯೋಜನೆ ಇದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶಾಸಕರಾದ ಹೆಚ್.ಆರ್. ಗವಿಯಪ್ಪ, ಎಂ.ಪಿ.ಲತಾ ಮಲ್ಲಿಕಾರ್ಜುನ, ನಾರಾ ಭರತ್ ರೆಡ್ಡಿ, ಕೆ.ಎಂ.ಎಫ್ ಅಧ್ಯಕ್ಷರಾದ ಭೀಮಾ ನಾಯ್ಕ್, ಬಿ.ಡಿ.ಸಿ.ಸಿ ಬ್ಯಾಂಕ್ ಉಪಾಧ್ಯಕ್ಷರಾದ ಐ.ದಾರುಕೇಶ್, ಬ್ಯಾಂಕಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಬಿ.ಜಯಪ್ರಕಾಶ್ ಸೇರಿದಂತೆ ಹಲವು ಗಣ್ಯರು, ಬ್ಯಾಂಕಿನ ವಿವಿಧ ತಾಲ್ಲೂಕುಗಳ ನಿರ್ದೇಶಕರು, ಸಹಕಾರ ಸಂಘಗಳ ಪ್ರತಿನಿಧಿಗಳು ಹಾಗೂ ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15. Near Bannimahankali Temple. 3rd Cross. New Amaravathi. Hospet - 583201. Vijayanagara Dist., Karnataka. Editor : BASAPUR BASAVARAJA. PRGI No:KARKAN/2023/88055

# ಚಿಕ್ಕ ಸಂಸಾರಕ್ಕೆ ಕುಟುಂಬ ಕಲ್ಯಾಣ ತಾತ್ಕಾಲಿಕ ವಿಧಾನ ಅನುಸರಿಸಬೇಕು

## ಜಿಲ್ಲಾ ಆರೋಗ್ಯ, ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶಬಾಬು ಸಲಹೆ

**ಹಂಪಿ ಟೈಮ್ಸ್ ಬಳ್ಳಾರಿ**

ಮೊದಲ ಮಗುವಿನ ಜನನ ನಂತರ ಚಿಕ್ಕ ಕುಟುಂಬ ಹೊಂದಲು ದಂಪತಿಗಳು ಸಮಾಲೋಚನೆ ಕೈಗೊಂಡು ಮುಂದಿನ 3 ವರ್ಷಗಳ ಅವಧಿಗೆ ಮಗುವಿನ ಜನನ ಅಂತರಕ್ಕಾಗಿ ಮಹಿಳೆಯು ಪ್ರತಿ 3 ತಿಂಗಳಿಗೊಮ್ಮೆ ತೆಗೆದುಕೊಳ್ಳಬಹುದಾದ ಸರಳ ಮತ್ತು ಸುಲಭವಾದ “ಅಂತರ” ಚುಚ್ಚುಮದ್ದು ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಲಭ್ಯವಿದ್ದು, ಚಿಕ್ಕ ಕುಟುಂಬ ಹೊಂದುವ ಮೂಲಕ ಹೆಚ್ಚುತ್ತಿರುವ ಜನಸಂಖ್ಯೆ ನಿಯಂತ್ರಣ ಮಾಡಬಹುದು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶಬಾಬು ಅವರು ಹೇಳಿದರು.

ಶನಿವಾರದಂದು, ಸಂಡೂರು ತಾಲ್ಲೂಕಿನ ಬಂಡ್ರಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ, ಹೆರಿಗೆಯಾದ ಬಾಣಂತಿಯರ ಆರೋಗ್ಯ ವಿಚಾರಿಸಿ ಪಾಲಕರೊಂದಿಗೆ ಮಾತನಾಡಿದ ಅವರು, ಹೆರಿಗೆಯಾದ ತಕ್ಷಣ ಬಾಣಂತಿಗೆ ಪಿಪಿಐಯುಸಿಡಿ ಅಳವಡಿಸುವ ಮೂಲಕ ಜನನ ತಡೆಗಟ್ಟಬಹುದಾಗಿದೆ ಎಂದು ತಿಳಿಸಿದರು.

ಮಾಲಾ ಡಿ, ಛಾಯ ನುಂಗುವ ಮಾತ್ರೆಗಳು



ಮತ್ತು ಕ್ರಮವಾಗಿ 5 ಮತ್ತು 10 ವರ್ಷಗಳವರೆಗೆ ಗರ್ಭ ನಿರೋಧಕ ಸಾಧನವಾಗಿರುವ ಐಯುಸಿಡಿ 375, ಐಯುಸಿಡಿ 380 ಅತ್ಯಂತ ಉಪಯುಕ್ತವಾಗಿವೆ. ವಿಶೇಷವಾಗಿ ಪುರುಷರಿಗೆ ನಿರೋಧ್ ಲಭ್ಯವಿದ್ದು, ವೈದ್ಯರ ಸಲಹೆ ಮೇರೆಗೆ ಪ್ರತಿ ತಿಂಗಳು 10 ದಿನಗಳ ಕಾಲ ಬಳಸುವ ಮೂಲಕ ಜನನ ಮಧ್ಯೆ ಅಂತರವಿಡಲು ಸಾಧ್ಯವಿದ್ದು, ಕುಟುಂಬದ ಸದಸ್ಯರು ಸಹ ದಂಪತಿಗಳಿಗೆ ಬೆಂಬಲ ನೀಡುವ ಮೂಲಕ ತಾಯಿ ಮಗುವಿನ ಆರೋಗ್ಯ ಕಾಪಾಡಲು ಸಹಕರಿಸಬೇಕು ಎಂದರು.

ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸುಸಜ್ಜಿತವಾದ ಹೆರಿಗೆ ಕೋಣೆ, ಮಗುವನ್ನು ಬೆಚ್ಚಗಿಡಲು ಬೇಬಿ ವಾರ್ಮರ್, ತಾಯಿಗೆ ಪೌಷ್ಟಿಕ ಆಹಾರ, ಮಗುವಿಗೆ ತಕ್ಷಣವೇ ಎದೆ ಹಾಲು ಉಣಿಸಲು ಸಿಬ್ಬಂದಿಗಳ ಕಾಳಜಿ, ಪೋಲಿಯೋ ಹನಿ, ಕಾಮಾಲೆ ತಡೆಗಟ್ಟುವ ಲಸಿಕೆ, ಕ್ಷಯರೋಗ ತಡೆಗಟ್ಟಲು ಬಿಸಿಜಿ ಲಸಿಕೆ, ಮಗುವಿನಲ್ಲಿ ಉಂಟಾಗಿರಬಹುದಾದ ಆಂತರಿಕ ರಕ್ತಸ್ರಾವ ತಡೆಗಟ್ಟಲು ವಿಟಮಿನ್ ಕೆ ಲಸಿಕೆಗಳನ್ನು ತಕ್ಷಣವೇ ನೀಡಲಾಗುವುದು. ಹಾಗಾಗಿ ಸರ್ಕಾರಿ ಆಸ್ಪತ್ರೆಗಳಲ್ಲಿಯೇ ಹೆರಿಗೆ ಮಾಡಿಸಲು ವಿನಂತಿಸಿದರು.

ಜಿಲ್ಲಾ ಆರೋಗವಾಹಕ ಆಶ್ರೀತ ರೋಗಗಳ ನಿಯಂತ್ರಣಾಧಿಕಾರಿ ಡಾ. ಅಬ್ದುಲ್ಲಾ ಅವರು ಮಾತನಾಡಿ, ಹಗಲು ಹೊತ್ತಿನಲ್ಲಿ ಗರ್ಭಿಣಿ, ಬಾಣಂತಿ, ನವಜಾತ ಶಿಶು ಹಾಗೂ ಕುಟುಂಬದ ಹಿರಿಯ ಸದಸ್ಯರು ಹಗಲು ಹೊತ್ತಿನಲ್ಲಿ ವಿಶ್ರಾಂತಿ ಪಡೆಯುವಾಗ ಸೊಳ್ಳೆ ಪರದೆ ಕಡ್ಡಾಯವಾಗಿ ಬಳಸಬೇಕು. ಈ ಮೂಲಕ ಡೆಂಗ್ಯೂ ರೋಗ ತಡೆಗಟ್ಟಲು ಕೈಜೋಡಿಸಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಂಡೂರು ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಭರತ್ ಕುಮಾರ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಶುಶ್ರೂಷಣಾಧಿಕಾರಿ ಪ್ರತಿಮ, ಕಾವೇರಿ, ಸಿಬ್ಬಂದಿಯವರಾದ ಕರಿಬಸಮ್ಮ, ಉಮೇಶ್ ಸೇರಿದಂತೆ ಇತರರು ಹಾಜರಿದ್ದರು.

# ಉದ್ಯೋಗ ಖಾತರಿ ಸಬಲತೆಯೆಡೆಗೆ ಆರಂಭ

**ಹಂಪಿ ಟೈಮ್ಸ್ ಕೊಟ್ಟೂರು**

ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ 2025-26 ನೇ ಸಾಲಿನ ಕಾರ್ಮಿಕ ಆಯವ್ಯಯ ತಯಾರಿಸಲು ಅ.2 ರಿಂದ ಒಂದು ತಿಂಗಳಕಾಲ ಜಿಪಂನ ಮುಖ್ಯಕಾರ್ಯ ನಿರ್ವಾಹಕ ಅಧಿಕಾರಿಗಳ ಸೂಚನೆ ಹಾಗೂ ಉಪ ಕಾರ್ಯದರ್ಶಿಗಳ ಮಾರ್ಗದರ್ಶನದಂತೆ ಎಲ್ಲಾ ಗ್ರಾಪಂ ಮಟ್ಟದಲ್ಲಿ "ಉದ್ಯೋಗ ಖಾತರಿ ನಡಿಗೆ ಸಬಲತೆಯೆಡೆಗೆ" ಅಭಿಯಾನ ಆರಂಭಿಸಲಾಗಿದೆ ಎಂದು ಕೊಟ್ಟೂರು ತಾಪಂ ಇಒ ಬಿ.ಆನಂದಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗ್ರಾ ಪಂ ವ್ಯಾಪ್ತಿಯ ಎಲ್ಲಾ ಗ್ರಾಮಗಳ ಪ್ರತಿ ಮನೆಗೆ ಭೇಟಿ ನೀಡಿ ಮಹಾತ್ಮ ಗಾಂಧಿ ನರೇಗಾ ಯೋಜನೆಯ ಕುರಿತು ಜಾಗೃತಿ, ಕುಟುಂಬಕ್ಕೆ ವರ್ಷದಲ್ಲಿ 100 ದಿನಗಳ ಕೆಲಸ ಖಾತರಿ. ಗಂಡು ಹೆಣ್ಣಿಗೆ ಸಮಾನ ಕೂಲಿ, ಪ್ರತಿ ದಿನಕ್ಕೆ ರೂ. 349 ರೂ.

ವಿಶೇಷ ಚೇತನರಿಗೆ ಶೇ.50 ರಿಯಾಯಿತಿ, ಕಾಮಗಾರಿಯ ಸ್ಥಳದಲ್ಲಿನ ಸೌಲಭ್ಯಗಳು, ಅಕುಶಲ ಮಹಿಳೆಯರು ಮತ್ತು ಲಿಂಗತ್ವ ಅಲ್ಪಸಂಖ್ಯಾತರುಗಳಿಗೆ,ಹೆಚ್ಚುವರಿಯಾಗಿ ಶೇ. 10 ಕೆಲಸ ಪ್ರಮಾಣದಲ್ಲಿ ರಿಯಾಯಿತಿ, ಮಹಿಳಾ ಭಾಗವಹಿಸುವಿಕೆಯನ್ನು ಕನಿಷ್ಠ ಶೇ.60 ಪ್ರತಿಶತಕ್ಕೆ ಹೆಚ್ಚಿಸುವ ಕುರಿತು ಅಭಿಯಾನದ ವೇಳೆ ತಿಳಿಸಬೇಕಿದೆ ಎಂದು ಮಾಹಿತಿ ನೀಡಿದ್ದಾರೆ.

ಈ ಅಭಿಯಾನದಲ್ಲಿ ಗ್ರಾಪಂ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಪಿಡಿಒ, ಪಂಚಾಯಿತಿ ಸಿಬ್ಬಂದಿ ಹಾಗೂ ನರೇಗಾ ಸಿಬ್ಬಂದಿಗಳಾದ ಕಾಯಕ ಬಂಧುಗಳು, ತಾಂಡಾ ರೋಜಗಾರ್ ಮಿತ್ರರು, ಗ್ರಾಮ ಕಾಯಕ ಮಿತ್ರರು ಬಿಎಫ್‌ಟಿಗಳು, ತಾಂತ್ರಿಕ ಸಹಾಯಕ ಅಭಿಯಂತರರು ಹಾಗೂ ಅನುಷ್ಠಾನ ಇಲಾಖೆಗಳ ಅಧಿಕಾರಿ, ಸಿಬ್ಬಂದಿಗಳು ಭಾಗವಹಿಸಬೇಕು.

ಪ್ರತಿ ಮನೆಗೂ ಭೇಟಿ ನೀಡಿ ವೈಯಕ್ತಿಕ ಹಾಗೂ ಸಮುದಾಯ ಕಾಮಗಾರಿಗಳ ಬೇಡಿಕೆಯ ಅರ್ಜಿಗಳನ್ನು ಸ್ವೀಕರಿಸಲು "ಬೇಡಿಕೆ ಪೆಟ್ಟಿಗೆ"ಯನ್ನು ಅಂಗನವಾಡಿ, ಗ್ರಂಥಾಲಯ, ನ್ಯಾಯಬೆಲೆ ಅಂಗಡಿ ಮತ್ತು ಹಾಲಿನ ಕೇಂದ್ರಗಳಲ್ಲಿ ಸ್ಥಾಪಿಸಿ ಪ್ರತಿದಿನ ಸ್ವೀಕೃತವಾದ ಬೇಡಿಕೆಗಳನ್ನು ಅ.31 ರವರೆಗೆ ಅರ್ಜಿಗಳನ್ನು ಸಂಗ್ರಹಿಸಬೇಕು ಹಾಗೂ ಮೊಬೈಲ್ ಅಪ್ಲಿಕೇಶನ್ ಕೂಡ ಸಿದ್ಧವಾಗಿದ್ದು, ಅದರ ಮೂಲಕವೂ ಸಾರ್ವಜನಿಕರು ವೈಯಕ್ತಿಕ ಹಾಗೂ ಸಮುದಾಯ ಕಾಮಗಾರಿಗಳ ಕುರಿತು ಅರ್ಜಿ ಸಲ್ಲಿಸಿ ಎಂದರು.











ಪೂಜ್ಯ ಶ್ರೀ.ಮ.ನಿ.ಪ್ರ.ಸ್ವ.ಜಗದ್ಗುರು
ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳಿಗೆ
ಜನ್ಮ ದಿನದ ಹಾರ್ದಿಕ ಶುಭಾಶಯಗಳು.
ನಿಮ್ಮ ಕೃಪೆಯಿಂದ ನಮ್ಮ ಜೀವನವು ಸದಾ
ಬೆಳಕಿನ ದಾರಿಯಲ್ಲಿ ಸಾಗತ್ತಿದೆ. ನಿಮ್ಮ
ಆಶೀರ್ವಾದದ ನೆರಳಿನಲ್ಲಿ ನಾವು ನಮ್ಮ
ಬದುಕಿನಲ್ಲಿ ಶ್ರೇಯಸ್ಸು ಮತ್ತು ಶಾಂತಿಯನ್ನು
ಕಂಡುಕೊಳ್ಳುತ್ತಿದ್ದೇವೆ.
ಬಸವಾದಿ ಶರಣರು ನಿಮಗೆ
ದೀರ್ಘಾಯುಷ್ಯ, ಆರೋಗ್ಯ ನೀಡಲೆಂದು
ಕೃತಜ್ಞತಾ ಮತ್ತು ಭಕ್ತಿಯಿಂದ ಪ್ರಾರ್ಥಿಸುತ್ತೇವೆ.
ಶ್ರೀ.ಮ.ನಿ.ಪ್ರ.ಸ್ವ.ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು
ಜನ್ಮ ದಿನದ ಹಾರ್ದಿಕ ಶುಭಾಶಯಗಳು
ಭಕ್ತಿಪೂರ್ವಕ ಶುಭಕೋರುವವರು:
ಎಚ್.ವಿ.ಶರಣಸ್ವಾಮಿ
ಸಮಾಜದ ಹಿರಿಯ ಮುಖಂಡರು, ನಿಕಟಪೂರ್ವ ಅಧ್ಯಕ್ಷರು ವೀರಶೈವ ಲಿಂಗಾಯತ ಸಮಾಜ, ಹೊಸಪೇಟೆ


ಪೂಜ್ಯ ಶ್ರೀ.ಮ.ನಿ.ಪ್ರ.ಸ್ವ.ಜಗದ್ಗುರು
ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳಿಗೆ
ಜನ್ಮ ದಿನದ ಹಾರ್ದಿಕ ಶುಭಾಶಯಗಳು.
ನಿಮ್ಮ ಕೃಪೆಯಿಂದ ನಮ್ಮ ಜೀವನವು ಸದಾ
ಬೆಳಕಿನ ದಾರಿಯಲ್ಲಿ ಸಾಗತ್ತಿದೆ. ನಿಮ್ಮ
ಆಶೀರ್ವಾದದ ನೆರಳಿನಲ್ಲಿ ನಾವು ನಮ್ಮ
ಬದುಕಿನಲ್ಲಿ ಶ್ರೇಯಸ್ಸು ಮತ್ತು ಶಾಂತಿಯನ್ನು
ಕಂಡುಕೊಳ್ಳುತ್ತಿದ್ದೇವೆ.
ಬಸವಾದಿ ಶರಣರು ನಿಮಗೆ
ದೀರ್ಘಾಯುಷ್ಯ, ಆರೋಗ್ಯ ನೀಡಲೆಂದು
ಕೃತಜ್ಞತಾ ಮತ್ತು ಭಕ್ತಿಯಿಂದ ಪ್ರಾರ್ಥಿಸುತ್ತೇವೆ.
ಪೂಜ್ಯ ಶ್ರೀ.ಮ.ನಿ.ಪ್ರ.ಸ್ವ.ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು
ಜನ್ಮ ದಿನದ ಹಾರ್ದಿಕ ಶುಭಾಶಯಗಳು
ಭಕ್ತಿಪೂರ್ವಕ ಶುಭಕೋರುವವರು:
ಕೆ.ರವಿಶಂಕರ
ಉದ್ಯಮಿ, ಹಾಗೂ ನಿಕಟಪೂರ್ವ ಪ್ರಧಾನ ಕಾರ್ಯದರ್ಶಿ, ವೀರಶೈವ ಲಿಂಗಾಯತ ಸಮಾಜ, ಹೊಸಪೇಟೆ


|| ಶ್ರೀ ಗುರು ಬಸವಲಿಂಗಾಯ ನಮಃ ||
ಗುರುವಿಂದ ದೈವಗಳು ಗುರುವಿಂದ ಬಂಧುಗಳು
ಗುರುವಿಂದಲೇ ಸಕಲ ಪುಣ್ಯಂಗಳು ಲೋಕಕ್ಕೆ
ಗುರುವೀಗ ದೈವ ಸರ್ವಜ್ಞ ||
ಪೂಜ್ಯ ಶ್ರೀ.ಮ.ನಿ.ಪ್ರ.ಸ್ವ.ಜಗದ್ಗುರು ಕೊಟ್ಟೂರು
ಬಸವಲಿಂಗ ಮಹಾಸ್ವಾಮಿಗಳು ಇವರಿಗೆ
ಜನ್ಮ ದಿನದ
ಹಾರ್ದಿಕ ಶುಭಾಶಯಗಳು
ಪೂಜ್ಯ ಶ್ರೀ.ಮ.ನಿ.ಪ್ರ.ಸ್ವ.ಜಗದ್ಗುರು
ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳಿಗೆ
ಜನ್ಮ ದಿನದ ಹಾರ್ದಿಕ ಶುಭಾಶಯಗಳು.
ನಿಮ್ಮ ಕೃಪೆಯಿಂದ ನಮ್ಮ ಜೀವನವು ಸದಾ
ಬೆಳಕಿನ ದಾರಿಯಲ್ಲಿ ಸಾಗತ್ತಿದೆ. ನಿಮ್ಮ
ಆಶೀರ್ವಾದದ ನೆರಳಿನಲ್ಲಿ ನಾವು ನಮ್ಮ
ಬದುಕಿನಲ್ಲಿ ಶ್ರೇಯಸ್ಸು ಮತ್ತು ಶಾಂತಿಯನ್ನು
ಕಂಡುಕೊಳ್ಳುತ್ತಿದ್ದೇವೆ.
ಬಸವಾದಿ ಶರಣರು ನಿಮಗೆ
ದೀರ್ಘಾಯುಷ್ಯ, ಆರೋಗ್ಯ ನೀಡಲೆಂದು
ಕೃತಜ್ಞತಾ ಮತ್ತು ಭಕ್ತಿಯಿಂದ ಪ್ರಾರ್ಥಿಸುತ್ತೇವೆ.
ಭಕ್ತಿ ಪೂರ್ವಕ ಶುಭಕೋರುವವರು:
ಕೆ.ಬಿ.ಶ್ರೀನಿವಾಸ ರೆಡ್ಡಿ, ಹೊಸಪೇಟೆ
ಉಪಾಧ್ಯಕ್ಷರು, ರಾಜ್ಯ ಕೆಪಿಸಿಸಿ ಪದವೀಧರ ಘಟಕ
ರಾಜ್ಯ ಕಾರ್ಯದರ್ಶಿಗಳು, ಅಖಿಲ ಭಾರತ ವೀರಶೈವ ಮಹಾಸಭಾ, ಬೆಂಗಳೂರು.
ಶ್ರೀಮತಿ ಬಿ.ಎಲ್.ರಾಣಿ ಸಂಯುಕ್ತ, ಹೊಸಪೇಟೆ
ರಾಜ್ಯ ಪ್ರಧಾನ ಕಾರ್ಯದರ್ಶಿಗಳು, ಕೆಪಿಸಿಸಿ ಬೆಂಗಳೂರು
ಸಮಾಜ ಸೇವಕರು ಹಾಗೂ ಗಣಿ ಮಾಲೀಕರು